



ಸಂಪುಟ 17 ಸಂಚಿಕೆ 01 1 ಜನವರಿ 1994 ರೂ. 2.00

# ಕೊನೆಗೂ ಕಳಂಕಿತರಲ್ಲಿ ಮೂವರು ಕುರ್ಚಿಬಿಟ್ಟರು!

## ಮುಂದಿನ ಪ್ರಶ್ನೆ: ಭ್ರಷ್ಟಾಚಾರವನ್ನು ಮುಚ್ಚಿಹಾಕುವ ಪ್ರಯತ್ನಗಳಿಗೆಂದು ಕೊನೆ?

ಶೇರು ಹಗರಣದಲ್ಲಿ ಜಂಟಿ ಸಂಸದೀಯ ಸಮಿತಿಯ ದೋಷಾರೋಪಣೆ ಹೊತ್ತ ಕೇಂದ್ರ ಆರೋಗ್ಯ ಸಚಿವ ಬಿ. ಶಂಕರಾನಂದ ಮತ್ತು ಗ್ರಾಮೀಣ ಅಭಿವೃದ್ಧಿ ಖಾತೆ ರಾಜ್ಯ ಸಚಿವ ರಾಮೇಶ್ವರ್ ಠಾಕೂರ್ ಹಾಗೂ ಸಕ್ಕರೆ ಹಗರಣದಲ್ಲಿ ಜ್ಞಾನ ಪ್ರಕಾಶ್ ಸಮಿತಿಯಿಂದ ದೋಷಾರೋಪಣೆ ಹೊತ್ತ ಆಹಾರ ಖಾತೆ ರಾಜ್ಯ ಸಚಿವ ಕಲ್ಪನಾಥ್ ರಾಯ್ ಕೊನೆಗೂ ರಾಜಿನಾಮೆ ನೀಡಿದ್ದಾರೆ. 'ನಾನು ಶಿಕ್ಷೆ ನೀಡುವವನಲ್ಲ' ಎಂದು ಕಳೆದವಾರ ಸಾರಿದ್ದ ಪ್ರಧಾನ ಮಂತ್ರಿಗಳು ಕೊನೆಗೂ ನೇರವಾಗಿ ಅವರನ್ನು ಮಂತ್ರಿಮಂಡಳದಿಂದ ಹೊರಹಾಕಿಲ್ಲ. ಬದಲಾಗಿ ತಾನೇನೂ ತಪ್ಪು ಮಾಡಿಲ್ಲ ಎಂದು ಕೊನೆಯವರೆಗೂ ಸಾಧಿಸುತ್ತಲೇ ಇದ್ದ ಈ "ಕಳಂಕಿತ"ರು ರಾಜೀನಾಮೆ ನೀಡುವಂತೆ ಹೇಳಲಾಯಿತು. ಸಂಸತ್ತಿನಲ್ಲಿ ರಾಷ್ಟ್ರೀಯರಂಗ-ಎಡರಂಗ ಸದಸ್ಯರ ಸತತ ವಿರೋಧವನ್ನು ತಡೆಯಲಾಗದೆ ಕೊನೆಗೂ ಹಗರಣಕೋರರಲ್ಲಿ ಎದ್ದು ಕಾಣುತ್ತಿದ್ದವರು ಬಿದ್ದು ಹೋದರು. ಆದರೆ ಹಗರಣಕೋರರರನ್ನು ರಕ್ಷಿಸುವ, ಹಗರಣಗಳನ್ನು ಮುಚ್ಚಿಹಾಕುವ ಚಾಳಿ ಮಾತ್ರ ಇನ್ನೂ ನಿಂತಿರುವಂತೆ ಕಾಣುತ್ತಿಲ್ಲ, ಏಕಿರಬಹುದು?

**ಕಳೆದ ಒಂದು ವಾರದ ಈ ನಾಟಕದ ಅಂಕಗಳನ್ನು ನೋಡಿ**

★ **ಡಿಸೆಂಬರ್ 15:** ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಪ್ರಧಾನಿಗಳ ಅಣಿಮುತ್ತು - 'ಕೆಲವರನ್ನು ಶಿಕ್ಷಿಸಬೇಕೆಂದು ಪ್ರತಿಪಕ್ಷಗಳು ಬಯಸುತ್ತಿವೆ. ಆದರೆ ನಾನು ಶಿಕ್ಷೆ ನೀಡುವವನಲ್ಲ"!

ಅದೇ ಸಭೆಯಲ್ಲಿ 'ಕಳಂಕಿತ' ಮಂತ್ರಿಗಳನ್ನು ನೋಡುತ್ತಾ "ಸಕ್ಕರೆ ಹಗರಣಕ್ಕೆ ಸಂಬಂಧವೇ ಇಲ್ಲದ ಸಚಿವರೊಬ್ಬರು ರಾಜೀನಾಮೆ ನೀಡಿದರು. ಆದರೆ ಹಗರಣದಲ್ಲಿ ನೇರವಾಗಿ ಒಳಗೊಂಡಿರುವವರು ಏನು ಮಾಡುತ್ತಿದ್ದಾರೆ" ಎಂದೂ ಹೇಳಿದರಂತೆ.

ಸಂಸತ್ತಿನ ಉಭಯ ಸದನಗಳಲ್ಲಿ ಆ್ಯಂಟನಿ ರಾಜೀನಾಮೆಯ ಬಗ್ಗೆ ಹೇಳಿಕೆಗೆ ಒತ್ತಾಯ. ಜ್ಞಾನ ಪ್ರಕಾಶ್ ಸಮಿತಿ ವರದಿ ಮಂಡಿಸಬೇಕೆಂಬ ಒತ್ತಾಯ.

★ **ಡಿಸೆಂಬರ್ 16:** "ನಾನೇಕೆ ರಾಜೀನಾಮೆ ನೀಡಬೇಕು! ನಾನೇಕೆ ಬಲಿಪಶುವಾಗಬೇಕು?" ಕಲ್ಪನಾಥ್ ರಾಯ್ ಪ್ರಶ್ನೆ. ಸದನದಲ್ಲಿ ನಿಲ್ಲದ ಪ್ರತಿಭಟನೆ.

★ **ಡಿಸೆಂಬರ್ 19:** "ಕಲ್ಪನಾಥ್ ರಾಯ್ ನಡವಳಿಕೆಯಲ್ಲಿ ಯಾವ ದುರುದ್ದೇಶವೂ ಇರಲಿಲ್ಲ" ಸಂಸತ್ತಿನಲ್ಲಿ ಪ್ರಧಾನಿಗಳ ಸರ್ಟಿಫಿಕೇಟ್.

> **ಕೊನೆ ಗಳಿಗೆಯವರೆಗೂ ತಾನು ರಕ್ಷಿಸಲು ಪ್ರಯತ್ನಿಸಿದ ಮೂವರು ಮಂತ್ರಿಗಳನ್ನು ಕೈಬಿಡದೆ ಪ್ರಧಾನಮಂತ್ರಿಗಳಿಗೆ ಬೇರೆ ದಾರಿಯೇ ಉಳಿದಿರಲಿಲ್ಲ.**
>
> **-ಕಾಂ. ಹರ್ಕಿಶನ್ ಸಿಂಗ್ ಸುರ್ಜಿತ್**
> **ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ**

★ **ಡಿಸೆಂಬರ್ 20:** ಕಳೆದ ಅಧಿವೇಶನದಲ್ಲಿ ವಿರೋಧ ಪಕ್ಷಗಳ ಭಾರೀ ಪ್ರತಿಭಟನೆಯಿಂದಾಗಿ ನಿರ್ವಾಹವಿಲ್ಲದೆ ಹಿಂತೆಗೆದುಕೊಂಡ ಶೇರು ಹಗರಣ ಕುರಿತ ಜೆ.ಪಿ.ಸಿ. ವರದಿಯ ಮೇಲಿನ ಕ್ರಿಯಾ ವರದಿಯ "ಪರಿಷ್ಕೃತ" ರೂಪವನ್ನು ಮಂಡಿಸಲಾಯಿತು. ಜೆ.ಪಿ.ಸಿ. ದೋಷಾರೋಪಣೆ ಮಾಡಿದ ಮೂವರು ಕೇಂದ್ರ ಮಂತ್ರಿಗಳಾದ ಡಾ. ಮನಮೋಹನ್ ಸಿಂಗ್, ಶಂಕರಾನಂದ ಹಾಗೂ ರಾಮೇಶ್ವರ್ ಠಾಕೂರ್ ರವರು ಈ ಬಗ್ಗೆ 'ವಿವರಣೆ'ಗಳನ್ನು ನೀಡಿರುವುದರಿಂದ ಅವರ ವಿರುದ್ಧ ಯಾವುದೇ ಕ್ರಮ ಇಲ್ಲ ಎಂದು ಘೋಷಣೆ.

'ಉದಾರೀಕರಣ'ದ ದೇ... ವಕೀಲ ಕಾಂಗ್ರೆ ಸಂಸತ್ ಸದಸ್ಯ ಮಣಿಶಂಕರ್ ಅಯ್ಯರ್ ... ಕಲ್ಪನಾಥ್‌ರಾಯ್‌ರವರ 'ಬಲವಾದ' ಸಮರ್ಥನೆ. ಸತತವಾಗಿ ಸರಿಯಾದ ನಿರ್ಣಯಗಳನ್ನೇ ಕೈಗೊಳ್ಳುತ್ತಿರುವ ಈ ಅಮಾಯಕ ಮಂತ್ರಿಯ ಬೇಟೆಯಾಡುತ್ತಿರೇಕೆ ಎಂದು ವಿರೋಧ ಪಕ್ಷಗಳ ಸದಸ್ಯರಿಗೆ ಅಯ್ಯರ್ ಪ್ರಶ್ನೆ!

ಉಭಯ ಸದನಗಳಲ್ಲಿ ನಿಲ್ಲದ ಪ್ರತಿಭಟನೆ -ಈಗ ಸರಕಾರ "ಪರಿಷ್ಕೃತ ಕ್ರಿಯಾ ವರದಿ" ಯೆಂಬ ಹೊಸ ಮೋಸಕ್ಕೂ ಪ್ರತಿರೋಧ.

★ **ಡಿಸೆಂಬರ್ 21:** ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ನರಸಿಂಹರಾವ್ ಸರಕಾರದ ನವಡಳಿಕೆಗಳ ಬಗ್ಗೆ ಮುಖ್ಯವಾಗಿ ಭ್ರಷ್ಟಾಚಾರದ ಬಗ್ಗೆ ಮಾನವ ಸಂಪನ್ಮೂಲ ಮಂತ್ರಿ ಅರ್ಜುನ್ ಸಿಂಗ್‌ರವರು ರಾಜೀನಾಮೆ ನೀಡುವ ಬೆದರಿಕೆಯೊಡ್ಡಿದ ಸುದ್ದಿ. ಉಭಯ ಸದನಗಳಲ್ಲಿ ಹಗರಣಕೋರರಿಗೆ ಶಿಕ್ಷೆ, ಹಗರಣಗಳನ್ನು ಮುಚ್ಚಿ ಹಾಕುವ ಪ್ರಯತ್ನಗಳ ಬಗ್ಗೆ ನಿಲ್ಲದ ಪ್ರತಿಭಟನೆ.

★ **ಡಿಸೆಂಬರ್ 22:** ಸಂಸತ್ತಿನಲ್ಲಿ ಪ್ರತಿಭಟನೆ ಮುಂದುವರಿಕೆ. ದೋಷಾರೋಪಣೆ ಹೊತ್ತ ಮೂವರು ಕೇಂದ್ರ ಮಂತ್ರಿಗಳ ರಾಜೀನಾಮೆ. ಕಳೆದವಾರ ನಾಗರಿಕ ಪೂರೈಕೆ ಮಂತ್ರಿ ಆಂಟಿನಿಯವರ ರಾಜೀನಾಮೆ ಸ್ವೀಕರಿಸದ ಪ್ರಧಾನಿ ತಕ್ಷಣ ಈ ಮೂರು ರಾಜೀನಾಮೆಗಳನ್ನು "ಜಾಗರೂಕತೆಯಿಂದ ಪರಿಶೀಲಿಸಿ" ಸ್ವೀಕರಿಸಿದರಂತೆ.

### "ಹಗರಣ ಪ್ರಿಯ ಈ ನಮ್ಮ......"?

ಕೊನೆಯ ಗಳಿಗೆಯವರೆಗೂ 'ಕಳಂಕಿತ' ಮಂತ್ರಿಗಳನ್ನು ರಕ್ಷಿಸಲು ಹೆಣಗಿದ ಪ್ರಧಾನಿ ಕೊನೆಗೂ ಸೋಲೊಪ್ಪಬೇಕಾಯಿತು. ಪ್ರಧಾನಿಗಳು ಏಕೆ ಇಷ್ಟೊಂದು ಹೆಣಗಾಡಿದರು, ಕೊನೆಗೂ ಏಕೆ ಸೋಲೊಪ್ಪಿಕೊಳ್ಳಬೇಕಾಯಿತು ಎಂಬುದೀಗ ಜನಗಳ ಮುಂದಿರುವ ಪ್ರಶ್ನೆ.

ಸಕ್ಕರೆ ಆಮದಿನಲ್ಲಿ ವಿಳಂಬದಿಂದಾಗಿ ದೇಶ ಮತ್ತು ಜನತೆ ಭಾರೀ ಬೆಲೆ ತೆರಬೇಕಾಯಿತು ಎಂದು ಜ್ಞಾನ ಪ್ರಕಾಶ್ ಸಮಿತಿ ವರದಿಯಿಂದ ಸ್ಪಷ್ಟವಾಗಿ ಸಾಬೀತಾಗಿದೆ.

ಉದ್ದೇಶಪೂರ್ವಕವಾದ ಈ ವಿಳಂಬದಿಂದ ಸಕ್ಕರೆ ದೊರೆಗಳು, ಆಮದುಗಾರರು ಹಾಗೂ ಅಧಿಕಾರದ ಉಚ್ಚ ವಲಯಗಳಲ್ಲಿರುವವರಿಗೆ ಭಾರೀ ಲಾಭ ಮಾಡಿಕೊಳ್ಳಲು ಅವಕಾಶವಾಗಿದೆ. ಆಹಾರ ಮಂತ್ರಿ ಕಲ್ಪನಾಥ್ ರಾಯ್ ಇದಕ್ಕೆ ಪ್ರಮುಖ ಹೊಣೆಗಾರರು. ಇತರ ಮಂತ್ರಿಗಳ ಜವಾಬ್ದಾರಿಯೂ ಸಾಕಷ್ಟಿದೆ. ಪ್ರಧಾನಮಂತ್ರಿಗಳಿಗೂ ಸಕ್ಕರೆಯ ಅಭಾವವಾಗಲಿದ್ದ ಬಗ್ಗೆ, ತಮ್ಮ ಮಂತ್ರಿಗಳು ಪರಸ್ಪರ ವಿರೋಧಿ ನಿಲುವು ತಳೆಯುತ್ತಿದ್ದರ ಬಗ್ಗೆ ಪೂರ್ಣ ಅರಿವಿತ್ತು ಎಂಬುದಕ್ಕೂ ಎಲ್ಲಾ ಪುರಾವೆಗಳಿವೆ. ಆದರೂ ಅವರು ಸೂಕ್ತ ಸಮಯದಲ್ಲಿ ಮಧ್ಯಪ್ರವೇಶಿಸಿ ಒಂದು ಸರಿಯಾದ ನಿರ್ಣಯ ತಗೊಳ್ಳಲಿಲ್ಲ, ಅಷ್ಟೇ ಅಲ್ಲ, ಸ್ಪಷ್ಟ ದೋಷಾರೋಪಣೆ ಹೊತ್ತ ಮಂತ್ರಿಯನ್ನು ತೆಗೆಯಲೂ ಇಲ್ಲ, ಪ್ರಧಾನ ಮಂತ್ರಿಗಳು ಏಕೆ ಈ ರೀತಿ ವರ್ತಿಸಿದರು? ಈ ಹಗರಣದಲ್ಲಿ ಪ್ರಧಾನಿಯನ್ನು ಹೊಣೆ ಮುಕ್ತರನ್ನಾಗಿಸಲು ಸಾಧ್ಯವೇ?


ಇನ್ನು ಶೇರು ಹಗರಣ ಕುರಿತಾದ ಜೆ.ಪಿ.ಸಿ.ಯ ಸರ್ವಸಮ್ಮತಿಯ ವರದಿ ಹಣಕಾಸು ಮಂತ್ರಿ ಮನಮೋಹನ್ ಸಿಂಗ್, ಶೇರು ಹಗರಣದ ಸಮಯದಲ್ಲಿ ತೈಲ ಖಾತೆಯಲ್ಲಿ ಮಂತ್ರಿಯಾಗಿದ್ದ ಶಂಕರಾನಂದ, ಹಾಗೂ ಹಣಕಾಸು ಇಲಾಖೆಯಲ್ಲಿ ರಾಜ್ಯ ಮಂತ್ರಿಯಾಗಿದ್ದ ರಾಮೇಶ್ವರ್ ಠಾಕೂರ್ ರ ವರ್ತನೆ ಬಗ್ಗೆ ನೇರ ಟಿಪ್ಪಣಿ ಮಾಡಿತ್ತು. ಈ ಬಗ್ಗೆ ಹಿಂದಿನ 'ಕ್ರಿಯಾ ವರದಿ'ಯಲ್ಲಿ ಏನೂ ಪ್ರಸ್ತಾಪವಿರಲಿಲ್ಲ, ಶೇರು ಹಗರಣದಲ್ಲಿ ಪ್ರಮುಖ ಪಾತ್ರಧಾರಿಗಳಾದ ವಿದೇಶೀ ಬ್ಯಾಂಕುಗಳ ಲೈಸೆನ್ಸ್ ರದ್ದು ಮಾಡಬೇಕೆಂಬ ಸಲಹೆಯನ್ನು ಸ್ವೀಕರಿಸಲಿಲ್ಲ. ಆಗಿನ ರಿಝರ್ವ್ ಬ್ಯಾಂಕ್ ಗವರ್ನರ್, ಉಪಗವರ್ನರ್ ಹಾಗೂ ಇತರ ಉಚ್ಚ ಅಧಿಕಾರಿಗಳ ನಡವಳಿಕೆ ಈ ಭಾರೀ ಹಗರಣಕ್ಕೆ ಎಷ್ಟು ಕಾರಣ ಎಂದು ಜೆ.ಪಿ.ಸಿ. ವರದಿ ವಿವರಿಸಿದ್ದರೂ ಅವರ ಮೇಲೂ ಯಾವುದೇ 'ಕ್ರಿಯೆ'ಯ ವರದಿಯಿರಲಿಲ್ಲ. ಇದನ್ನು ಹಿಂದಿನ ಅಧಿವೇಶನದಲ್ಲಿ ರಾಷ್ಟ್ರೀಯರಂಗ-ಎಡರಂಗ ಪಕ್ಷಗಳು ಹಾಗೂ ಇತರ ವಿರೋಧ ಪಕ್ಷಗಳು ಬಲವಾಗಿ ವಿರೋಧಿಸಿದ್ದರಿಂದ "ಪರಿಷ್ಕೃತ" ಕ್ರಿಯಾ ವರದಿ ನೀಡಲು ಸರಕಾರ ಒಪ್ಪಿಕೊಂಡಿತ್ತು. ಆದರೆ ಈ ಪರಿಷ್ಕೃತ ವರದಿಯಲ್ಲೂ ವಿರೋಧ ಪಕ್ಷಗಳೆತ್ತಿದ ಈ ಮೂರು ಪ್ರಮುಖ ಅಂಶಗಳ ಬಗ್ಗೆ ಹೊಸದೇನೂ ಇಲ್ಲ, ಮಂತ್ರಿಗಳು ಈಗಾಗಲೇ 'ವಿವರಣೆ' ನೀಡಿರುವುದರಿಂದ ಅವರ ಮೇಲೆ ಸರ್ಕಾರ ಕ್ರಮ ಕೈಗೊಳ್ಳುವುದಿಲ್ಲವಂತೆ. ವಿದೇಶೀ ಬ್ಯಾಂಕುಗಳ ವಿರುದ್ಧ ಕೆಲವು ಕ್ರಮ ಕೈಗೊಳ್ಳಲಾಗಿದೆ, ಇನ್ನು ತೀವ್ರ ಕ್ರಮ ಕೈಗೊಂಡರೆ 'ಉದಾರೀಕರಣ'ದ ಆರೋಗ್ಯಕ್ಕೆ ಒಳ್ಳೆಯದಲ್ಲವಂತೆ. ಇನ್ನು ಇತರ ಉಚ್ಚ ಅಧಿಕಾರಿಗಳ ಮೇಲೂ ಕ್ರಮ ಕೈಗೊಳ್ಳಲೂ ಸಾಧ್ಯವಿಲ್ಲವಂತೆ. ಆದರೆ ಈ ಹಗರಣದ 96 ಕೇಸುಗಳಲ್ಲಿ 48 ಕೆಳಮಟ್ಟದ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳಲು ಮಾತ್ರ ಸಾಧ್ಯವಾಗಿದೆ!

### ಇದೆಂಥಾ ಸರಕಾರ!
### ಇದೆಂಥಾ ಆಳುವ ಪಕ್ಷ!

ಆದರೆ ಡಿಸೆಂಬರ್ 22ರಂದು ತೃಪ್ತಿಕರ 'ವಿವರಣೆ' ನೀಡಿದ ಮಂತ್ರಿಗಳ ರಾಜೀನಾಮೆ ಪಡೆಯಲಾಯಿತು! ಏನೂ 'ದುರುದ್ದೇಶ'ವಿರದಿದ್ದ, 'ಮುಗ್ಧ' ಮಂತ್ರಿಯಿಂದಲೂ ರಾಜೀನಾಮೆ ಪಡೆಯಲಾಯಿತು. ಏಕೆ? ಅದಿರಲಿ, ಹಿಂದಿನ 'ಕ್ರಿಯಾ ವರದಿ'ಯಲ್ಲಿದ್ದ 273 ಐಟಂಗಳಲ್ಲಿ 147ನ್ನು ಈ 'ಪರಿಷ್ಕೃತ' ವರದಿಯಲ್ಲಿ ಪರಿಷ್ಕರಿಸಬೇಕಾಗಿ ಏಕೆ ಬಂತು ಎಂದು 'ಉದಾರೀಕರಣ'ದ ಪರವಾಗಿರುವ ಪತ್ರಿಕೆಯೊಂದೂ ಪ್ರಶ್ನಿಸುವಂತಾಗಿದೆ. ಈ ಸರಕಾರಕ್ಕೆ ನೀತಿ ನಿಲುವೆಂಬುದಿದೆಯೇ, ದೇಶವನ್ನಾಳುವ ಸಾಮರ್ಥ್ಯ ಈ ಪಕ್ಷಕ್ಕಿದೆಯೇ ಎಂದು ಜನ ಕೇಳುವಂತಾಗಿದೆ.

ಈಗಾಗಲೇ ಕರ್ನಾಟಕ, ಆಂಧ್ರಪ್ರದೇಶದ ಮತದಾರರು ಈ ಪಕ್ಷ ವಿಶ್ವಾಸಾರ್ಹ ಪಕ್ಷ ಅಲ್ಲ ಎಂದು ಎರಡೂ ಕಡೆ ಅದಕ್ಕೆ ಪ್ರಮುಖ ವಿರೋಧ ಪಕ್ಷದ ಸ್ಥಾನಮಾನವೂ ಸಿಗದಂತೆ ಮಾಡಿ ತಮ್ಮ ತೀರ್ಪು ನೀಡಿದ್ದಾರೆ. ಕಾಂಗ್ರೆಸ್ ಆಳರಸರ ಭ್ರಷ್ಟ ನಡವಳಿಕೆ ಕಾಂಗ್ರೆಸ್‌ನ ಇಂತಹ ಅವಮಾನಕಾರೀ ಸೋಲಿಗೆ ಒಂದು ಪ್ರಮುಖ ಕಾರಣ ಎಂದು ಕಾಂಗ್ರೆ ಮುಖಂಡರಿಗೆ ಇನ್ನೂ ಅರ್ಥವಾಗಿಲ್ಲವೇ?

ಆಂಧ್ರಪ್ರದೇಶದ ಮತದಾರರಿಗೆ ತೆಲುಗು ದೇಶಂ ಕೆ.ಜಿ.ಗೆ 2 ರೂ.ಯಂತೆ ಅಕ್ಕಿ ಪೂರೈಸುವ ವಚನ ನೀಡಿತ್ತು. ಇದು 'ಕೆಟ್ಟ ಅರ್ಥಶಾಸ್ತ್ರ', 'ಅಗ್ಗದ ಜನಪ್ರಿಯತೆ ಗಳಿಸುವ ಕ್ರಮ' ಎಂದು ಮೊದಲು ಲೇವಡಿ ಮಾಡಿದ ಕಾಂಗ್ರೆ




ವಾರದ ವ್ಯಂಗ್ಯ ಚಿತ್ರ — ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ನೈನಾನ್


**'ಐಕ್ಯರಂಗ' ಓದುಗರಿಗೆ ವಿಜೆನ್ಸಿದಾರರಿಗೆ 1995ರ ಶುಭಾಶಯಗಳು**

"ಬರುತಿವೆ, ಬರುತಿವೆ ಸಂಘರ್ಷದ ದಿನಗಳು" ಎಂದು ಆರಂಭಿಸಿದ 1994ರ ಅಂತ್ಯದ ವೇಳೆಗೆ ದೇಶದ ಪ್ರಜಾಪ್ರಭುತ್ವ ಆಂದೋಲನ ಗಮನಾರ್ಹ ವಿಜಯ ಸಾಧಿಸಿದೆ. ಇಲ್ಲಿಂದ ಮುನ್ನಡೆಯುವ ಹೋರಾಟದ ಇನ್ನೊಂದು ವರ್ಷಕ್ಕೆ ಕಾಲಿಡುತ್ತಿದೆ. ಈ ಸಂದರ್ಭದಲ್ಲಿ ಎರಡು ಪುಟಗಳ ಕ್ಯಾಲೆಂಡರ್ ನೀಡುತ್ತಿದ್ದೇವೆ.

ಪುಟ 2-7

ಎಂಗೆಲ್ಸ್ ಇಡೀ ಜಗತ್ತಿನಲ್ಲಿ
ಆಧುನಿಕ ಶ್ರಮಜೀವಿ ವರ್ಗದ
ಅತ್ಯುತ್ಕೃಷ್ಟ ವಿದ್ವಾಂಸರು ಹಾಗೂ
ಶಿಕ್ಷಕರು.

-ಲೆನಿನ್



100

# ಫ್ರೆಡರಿಕ್ ಎಂಗೆಲ್ಸ್

28.11.1820 - 5.8.1895

# 1995

ಅಂತರ್ರಾಷ್ಟ್ರೀಯ
ಜೋಸ್‌ಮಾರ್ತಿ
ವರ್ಷ

●

ಕ್ಯೂಬಾದ
ದಿಗ್ಬಂಧನದ
ವಿರುದ್ಧ
ಹೋರಾಟದ
ವರ್ಷ

ಮೇ 19, 1995
ಕ್ಯೂಬಾ
ಬೆಂಬಲ
ದಿನ

## ಜನವರಿ

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | 31 | | | | |

## ಫೆಬ್ರವರಿ

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | | | | |

## ಮಾರ್ಚ್

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | 31 | |

## ಎಪ್ರಿಲ್

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| 30 | | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |

## ಮೇ

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | 30 | 31 | | | |

## ಜೂನ್

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | 29 | 30 | |


ಐಕ್ಯರಂಗ
ಕರ್ನಾಟಕದ ಶ್ರಮಜೀವಿಗಳ ದನಿ

# ಕಚ್ಚಾಟ ನಿಲ್ಲಿಸಿ ಜನರ ಬೇಡಿಕೆಗೆ ಗಮನ ಕೊಡಿ

## ಕರ್ನಾಟಕ ರಾಜ್ಯದ ಕೃಷಿಕೂಲಿಕಾರರ ಬೆಂಗಳೂರು ಚಲೋ ಹೊಸ ಸರ್ಕಾರಕ್ಕೆ ಮನವಿ

ಡಿಸೆಂಬರ್ 20 ರಂದು ಹೊಸದಾಗಿ ಅಧಿಕಾರದ ಗದ್ದುಗೆ ಏರಿರುವ ಜನತಾ ದಳದ ಸರ್ಕಾರಕ್ಕೆ ರಾಜ್ಯದ ವಿವಿಧ ಜಿಲ್ಲೆಗಳ ಕೂಲಿಕಾರರು ಕೇಂದ್ರ ಹಾಗೂ ರಾಜ್ಯದ ಕಾಂಗ್ರೆಸ್ ಸರ್ಕಾರಗಳಿಂದ ತಮ್ಮ ಜೀವನದ ದುಸ್ಥಿತಿಯನ್ನು ವಿವರಿಸಿ ಕೂಲಿ,ಭೂಮಿ ಮುಂತಾದ ತಮ್ಮ ಬೇಡಿಕೆಗಳ ಪಟ್ಟಿಯೊಂದನ್ನು ಸರ್ಕಾರದ ಮುಂದೆ ಮಂಡಿಸಿದ್ದಾರೆ. ಜೊತೆಗೆ ಅಖಿಲ ಭಾರತ ಮಟ್ಟದಲ್ಲಿ ಕೃಷಿ ಕೂಲಿಕಾರರ ಕಾನೂನನ್ನು ತರಲು ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿ ರಾಜ್ಯಪಾಲರಿಗೆ ಮನವಿ ಅರ್ಪಿಸಿದ್ದಾರೆ.ಅಂದು ಬೆಳ್ಳಿಗ್ಗೆ ಬೆಂಗಳೂರು ನಗರದ ಚಿಕ್ಕಲಾಲ್ ಬಾಗಿನಿಂದ ಸುಮಾರು 2000 ಕೃಷಿಕೂಲಿಕಾರರು ಮೆರವಣಿಗೆ ಹೊರಟು ವಿಧಾನ ಸೌಧದ ಮುಂದೆ ಕಬ್ಬನ್ ಪಾರ್ಕಿನಲ್ಲಿ ಧರಣಿ ನಡೆಸಿದಾಗ ಹೊಸ ಜನತಾದಳ ಸರಕಾರದ ಮಂತ್ರಿಗಳಾದ ಎಂ.ಪಿ.ಪ್ರಕಾಶ್ ಹಾಗೂ ಪಿ.ಜಿ.ಆರ್.ಸಿಂಧ್ಯಾ ಬಂದು ಧರಣಿ ಕೂತವರನ್ನು ಭೇಟಿ ಮಾಡಿದರು.

ಕೃಷಿ ಕೂಲಿಕಾರರು ಕಾಂಗ್ರೆ ನೀತಿಗಳಿಂದ ಅತೃಪ್ತರಾಗಿ ದೊಡ್ಡ ಪ್ರಮಾಣದಲ್ಲಿ ಜನತಾದಳದ ಸರ್ಕಾರದ ಗೆಲುವಿಗೆ ಕಾರಣರಾಗಿದ್ದಾರೆ. ಆದರೆ ಜನತಾದಳದ ಸರ್ಕಾರ ಮೊದಲ ದಿನದಿಂದಲೇ ಭಿನ್ನಾಭಿಪ್ರಾಯಗಳು ಆರಂಭವಾಗಿವೆ. ಆದ್ದರಿಂದ ನಿಮ್ಮ ನಿಮ್ಮ ಕಚ್ಚಾಟಗಳಲ್ಲೇ ಮುಳಗದೆ ನಿಮ್ಮನ್ನು ಆರಿಸಿದ ಜನತೆಯ ಹಿತದ ಕಡೆಗೆ ಗಮನ ಕೊಡಿ ಎಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ನೇತೃತ್ವದಲ್ಲಿ ಕೃಷಿ ಕೂಲಿಕಾರರು ಆಗ್ರಹಿಸಿದ್ದಾರೆ.

ಕೃಷಿ ಕೂಲಿಕಾರರ ಬೇಡಿಕೆಗಳು

1. ಭೂಮಿ, ತಾವು ಈಗಾಗಲೇ ಹಲವು ವರ್ಷಗಳಿಂದ ಸಾಗುವಳಿ ಮಾಡುತ್ತಿರುವ ಸರ್ಕಾರಿ ಭೂಮಿಗಳಿಗೆ ಪಟ್ಟಾ ಕೊಡಿ, ಭೂಮಿ ಸಕ್ರಮಗೊಳಿಸುವ ಸಮಿತಿಗಳಲ್ಲಿರುವ ಭ್ರಷ್ಟಾಚಾರವನ್ನು ದೂರಮಾಡಿ,ಕೆಲಸ ತ್ವರಿತ ಗೊಳಿಸಿ ಹಾಗೂ ಈ ಸಮಿತಿಗಳನ್ನು ಪುನರ್ ರಚಿಸಿ, ಅದರಲ್ಲಿ ಕೃಷಿ ಕೂಲಿಕಾರರ ಹಾಗೂ ಬಡ ರೈತರ ಪ್ರಾಮಾಣಿಕ ಪ್ರತಿನಿಧಿಗಳನ್ನು ಸೇರಿಸಿ.

2. ರಾಜ್ಯದಲ್ಲಿ ಸರ್ಕಾರಿ ಭೂಮಿ ಇರುವ ಎಲ್ಲಡೆಗಳಲ್ಲಿ ಅದನ್ನು ಬಡಕೃಷಿ ಕೂಲಿಕಾರರಿಗೆ ಹಂಚಿಕೊಡಿ.

3. ಅರಣ್ಯ ಇಲಾಖೆಯವರ ದಬ್ಬಾಳಿಕೆ,ಹಿಂಸಾಚಾರವನ್ನು ತಡೆಹಿಡಿಯಿರಿ,ಹಾನಗಲ್ ತಾಲ್ಲೂಕಿನಲ್ಲಿ ಹಿಂಸಾಚಾರ ಮಾಡಿದ ಅರಣ್ಯ ಇಲಾಖೆ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿ.

4. ಭೂಮಿ ಹೋರಾಟದಲ್ಲಿ ರಾಜ್ಯ ಕೃಷಿ ಕೂಲಿಕಾರರ ಮೇಲಿರುವ ಸುಳ್ಳು ಕೇಸುಗಳನ್ನು ಹಿಂತೆಗೆದು ಕೊಳ್ಳಿ.

5. ಭೂ ಸುಧಾರಣಾ ಕಾನೂನಿನಲ್ಲಿ ಗೇಣಿದಾರರು ಇಲ್ಲವೇ ಇಲ್ಲ ಎನ್ನುವರಿದ್ದರೂ ಲಕ್ಷಾಂತರ ಕೂಲಿಕಾರರು,ಬಡ ರೈತರು ಗೇಣಿದಾರರಾಗಿ ತಮ್ಮ ದುಡಿಮೆಯ ಅರ್ಧಬಾಗ ಹಾಗೂ ಮೂರನೇ ಎರಡು ಬಾಗ ಕೆಲವು ಕಡೆ ಮುಕ್ಕಾಲು ಬಾಗವನ್ನು ಕಾಯಿದೆ ವಿರುದ್ಧವಾಗಿ ಪಾಳೆಯಗಾರಿ,ಭೂ ಮಾಲೀಕರಿಗೆ ಅರ್ಪಿಸಬೇಕಾಗಿದೆ. ಇದನ್ನು ನಿರ್ಭಂಧಿಸಲು ಕಾನೂನು ತಿದ್ದುಪಡಿ ಮಾಡಿ ರಕ್ಷಣೆ ಕೊಡಿ.

6. ಕಾಂಗ್ರೆ ಸರ್ಕಾರ ಮಾಡಿದ ಕನಿಷ್ಠ ಕೂಲಿ ಏರಿಕೆ ಕೇವಲ ಕಣ್ಣೊರೆಸುವ ನಾಟಕವಾಗಿದೆ. ಅದನ್ನು ವೈಜ್ಞಾನಿಕವಾಗಿ ಮಾನವ ಅವಶ್ಯಕತೆಗನುಗುಣವಾಗಿ ನಿರ್ಧರಿಸಿ ಕನಿಷ್ಠ ಕೂಲಿ ಜಾರಿಗಾಗಿ ವ್ಯವಸ್ಥೆ ರೂಪಿಸಿ.

7.ಕೂಲಿಕಾರರಿಗೊಂದು ಕಾನೂನು

ಎಲ್ಲಾ ರೀತಿಯ ಕೆಲಸಗಾರರ ಕೆಲಸ ಸ್ಥಿತಿಯ ವಿಂಗಡಣೆ ಹಾಗೂ ಕೆಲಸಗಾರರ ರಕ್ಷಣೆಗೆ ಕಾನೂನುಗಳಿದ್ದರೂ ಅತ್ಯಂತ ಹೆಚ್ಚು ಶೋಷಣೆಗೊಳಗಾದ ಕೃಷಿ ಕೂಲಿಕಾರರ ಶೋಷಣೆಯ ನಿಯಂತ್ರಣಕ್ಕಾಗಿ ಕೇರಳದ ಮಾದರಿಯಲ್ಲಿ ಕಾನೂನು ತನ್ನ ಅಖಿಲ ಬಾರತ ಮಟ್ಟದಲ್ಲಿ ಇಂತಹ ಕಾನೂನಿಗಾಗಿ ಒತ್ತಾಯಿಸಿ ಮನೆ, ವಸತಿ, ನಿವೇಶನ, ವೃದ್ಧಾಪ್ಯವೇತನ ಇವುಗಳಲ್ಲಿ ಭ್ರಷ್ಟಾಚಾರ ಇವನ್ನು ತೊಲಗಿಸಿ ಎಲ್ಲಾ ಬಡ ನಿವೇಶನ ರಹಿತರಿಗೂ ಮನೆ ಒದಗಿಸುವ ಯೋಜನೆ ರೂಪಿಸಿ.

8. ರೇಷನ್ ಪದ್ಧತಿ ಬಗ್ಗೆ

ಬೆಲೆ ಏರಿಕೆಯ ವಿರುದ್ಧ ರೇಷನ್ ಹಾಗೂ ದಿನ ಬಳಕೆಯ ವಸ್ತುಗಳ ಬೆಲೆ ಇಳಿಸಿ ಆದರಲ್ಲಿರುವ ಭ್ರಷ್ಟಾಚಾರ ತೊಲಗಿಸಿ,ರೇಷನ್ ಹಂಚಿಕೆ ಉಸ್ತುವಾರಿ ಸಮಿತಿಗಳನ್ನು ಹಸಿರು ಕಾರ್ಡುದಾರರಿಂದಲೇ ರೂಪಿಸಿ, ಉಳ್ಳವರಿಗೆ ನೀಡಿದ ಹಸಿರು ಕಾರ್ಡುಗಳನ್ನು ವಜಾ ಮಾಡಿ ಇತ್ಯಾದಿ ಬೇಡಿಕೆಗಳನ್ನು ಸರ್ಕಾರದ ಮುಂದೆ ಮಂಡಿಸಿದ್ದಾರೆ.

ಸರ್ಕಾರವು ಮುಂದಿನ ದಿನಗಳಲ್ಲಿ ಇದರ ಬಗ್ಗೆ ಗಮನ ಕೊಡದಿದ್ದರೆ ಕೆಲವು ಸಮಯ ಕಾದು ರಾಜ್ಯದಾದ್ಯಂತ ಹೋರಾಟ ರೂಪಿಸಲಿದ್ದಾರೆ ಎಂದು ಕರ್ನಾಟಕ ಪ್ರಾಂತಾಕೃಷಿ ಕೂಲಿಕಾರರ ಸಂಘದ ಕಾರ್ಯಾಧ್ಯಕ್ಷರಾದ ಜಿ.ಎನ್.ನಾಗರಾಜ್ ಹಾಗೂ ಪ್ರಧಾನ ಕಾರ್ಯದರ್ಶಿ ಪಿ.ಜಗನ್ನಾಥ್ ಪತ್ರಿಕಾ ಹೇಳಿಕೆಯೊಂದರಲ್ಲಿ ತಿಳಿಸಿದ್ದಾರೆ.

## ಗ್ರಾಮ ಪಂಚಾಯತಿ ನೌಕರರ ಸಮಸ್ಯೆಗಳು: ಹೊಸ ಸಚಿವರಿಗೆ ಮನವಿ

ಕರ್ನಾಟಕ ರಾಜ್ಯ ಪಂಚಾಯತ್ ನೌಕರರ ಸಂಘದ ಮುಖಂಡರು ಗ್ರಾಮಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ಯ ಇಲಾಕೆ ಮಂತ್ರಿ ಎಂ.ಪಿ. ಪ್ರಕಾಶ್‌ರವರನ್ನು ಭೇಟಿ ಮಾಡಿ ಕರ್ನಾಟಕ ರಾಜ್ಯದ 25000 ಕ್ಕೂ ಮೇಲ್ಪಟ್ಟ ಗ್ರಾಮ ಪಂಚಾಯತಿ ನೌಕರ ಸಮಸ್ಯೆಗಳ ಬಗ್ಗೆ ವಿವರಿಸಿದರು ಇವರಲ್ಲಿ ಹೆಚ್ಚಿನವರಿಗೆ ಕಳೆದ ಒಂದು ವರ್ಷದಿಂದ ಪಗಾರ ಸಿಗುತ್ತಿಲ್ಲ ಸರಕಾರದಿಂದ ಕೊಡ ಮಾಡುವ ಅನುದಾನವನ್ನು ಬಿಟ್ಟರೆ ಗ್ರಾಮ ಪಂಚಾಯತಿಯಿಂದ ಕರೆ ಮತ್ತಿತರ ಮೂಲಗಳಿಂದ ಸಂಗ್ರಹವಾಗುವ ಹಣದಿಂದಲೇ ನೌಕರರಿಗೆ ಸಂಬಳ ಕೊಡುವುದರಿಂದ ಈ ನೌಕರರಿಗೆ ಸಂಬಳ ಸಿಗಲಾರದಾಗಿದೆ. ಸರ್ಕಾರದ ಒಂದು ಜಿ.ಒ.ಪ್ರಕಾರ ಅಭಿವೃದ್ಧಿ ಕೆಲಸಗಳಲ್ಲಿ ತೊಡಗಿರುವ ನೌಕರರಿಗೆ ಸರಕಾರ ನೀಡುವ ಅನುದಾನದಿಂದ ಪಗಾರ ಕೊಡಬೇಕೆಂದು ಉಲ್ಲೇಖಿಸಲಾಗಿದೆ. ಈ ಅಂಶವನ್ನು ಹಿಂದಿನ ಸರ್ಕಾರಕ್ಕೆ ತಿಳಿಸಲಾಗಿತ್ತು. ಅದರ ಪ್ರಕಾರ ಪಂಪ್ ಅಪರೇಟರ್ ಮತ್ತು ಕಸಗುಡಿಸುವವರಿಗೆ ಸರಕಾರಿ ಅನುದಾನದಿಂದಲೂ ಬಿಲ್ ಕಲೆಕ್ಟರ್,ಜವಾನರಿಗೆ ಗ್ರಾಮ ಪಂಚಾಯತಿ ಸಂಗ್ರಹಿಸುವ ಹಣದಿಂದಲೂ ಪಗಾರ ಕೊಟ್ಟಿದ್ದಾರೆ ನೌಕರರಿಗೆ ಅನ್ಯಾಯವಾಗುವುದಿಲ್ಲ ಮಾತ್ರವಲ್ಲ ಗ್ರಾಮ ಪಂಚಾಯತಿಯ ಆರ್ಥಿಕ ಸಮಸ್ಯೆಗೆ ಪರಿಹಾರ ಸಿಗಬಹುದಾಗಿದೆಂದು ತಿಳಿಸಲಾಗಿತ್ತು

ಇದರ ಜೊತೆಯಲ್ಲಿಯೇ ಯಾವ ಭದ್ರತೆಯು ಇಲ್ಲದ ಗ್ರಾಮ ಪಂಚಾಯತಿ ನೌಕರರ ಕುರಿತು ಹಲವಾರು ಬೇಡಿಕೆಗಳಿಗಾಗಿ ಹೋರಾಡುತ್ತಾ ಬಂದಿದ್ದೇವೆ ಅವುಗಳಿಗೆಲ್ಲ ಪರಿಹಾರ ಸಿಕ್ಕಿಲ್ಲ, ಅವುಗಳಲ್ಲಿ ಕೆಲವು ಬೇಡಿಕೆಗಳನ್ನು ಮಂತ್ರಿಗಳ ಮುಂದಿಟ್ಟಿದ್ದರು. ಪ್ರತಿ ತಿಂಗಳು ಸರಿಯಾಗಿ ವೇತನ,ಜೀವನಾವಶ್ಯಕ ಕನಿಷ್ಟ ವೇತನ, ಸೇವಾ ನಿಯಮ ತಯಾರಿ,ಎಸ್‌ಎಸ್ ಎಲ್ ಸಿ ಪಾಸಾಗಿ ೧೦ ವರ್ಷ ಸೇವೆ ಸಲ್ಲಿಸಿದ ನೌಕರರ ಬಡ್ತಿಗಾಗಿ ಶೇ.೫೦ ಸ್ಥಾನ ಕಾದಿರಿಸುವುದು, ಗ್ರಾಮ ಪಂಚಾಯತಿ ವ್ಯವಸ್ಥೆ ಅನುಷ್ಠಾನದಲ್ಲಿ ಬಂದ ನಂತರ ಒಂದು ಕಡೆ ಸೇವೆಯಲ್ಲಿರುವ ನೌಕರರಿಗೆ ಸರಿಯಾಗಿ ವೇತನ ಸಿಗದಿರುವಾಗಲೇ ಹೊಸ ನೌಕರರನ್ನು ಅನಧಿಕೃತವಾಗಿ ನೇಮಿಸಲಾಗುವುದನ್ನು ತಡೆಯುವುದು, ಹಲವಾರು ವರ್ಷಗಳಿಂದ ಸೇವೆ ಸಲ್ಲಿಸಿ ಮೃತರಾದ ಅವರ ಮಕ್ಕಳಿಗೆ ಅನುಕಂಪದ ಆಧಾರದಲ್ಲಿ ನೌಕರಿ ನಿವೃತ್ತರಾದವರಿಗೆ ಸ್ವಲ್ಪ ಪರಿಹಾರ ಮುಂತಾದ ಬೇಡಿಕೆಗಳನ್ನು ಮಂತ್ರಿಗಳ ಗಮನಕ್ಕೆ ತರಲಾಯಿತು. ಈ ಬೇಡಿಕೆಗಳ ಕುರಿತು ತಾವು ತೀವ್ರ ಗಮನಹರಿಸಬೇಕು ಗ್ರಾಮ ಪಂಚಾಯತಿ ನೌಕರರ ಸಮಸ್ಯೆಗಳ ಕುರಿತು ಚರ್ಚಿಸಲು ಅಧಿಕಾರಿಗಳ ಜೊತೆಯಲ್ಲಿ ಒಂದು ಜಂಟಿ ಸಭೆ ಕರೆಯಬೇಕೆಂದು ಮಂತ್ರಿಗಳನ್ನು ಒತ್ತಾಯಿಸಲಾಯಿತು.

ಸುದ್ದಿ - ಸಮಾಚಾರ

ಚುನಾವಣಾ ವಿಶ್ಲೇಷಣೆ



## ಕರ್ನಾಟಕ ವಿಧಾನಸಭಾ ಚುನಾವಣೆಗಳು-94

ಹಿಂದಿನ ಸಂಚಿಕೆಯಲ್ಲಿ ಉತ್ತರ ಕರ್ನಾಟಕದ ಐದು ಜಿಲ್ಲೆಗಳ ವಿಧಾನಸಭಾ ಚುನಾವಣೆಳ ಅಂಕಿ ಅಂಶಗಳನ್ನು ನೋಡಿರುವಿರಿ. ಈ ಬಾರಿ ಕರಾವಳಿ ಹಾಗೂ ಮಲೆನಾಡು ಜಿಲ್ಲೆಗಳ ವಿವರ

### ದಕ್ಷಿಣ ಕನ್ನಡ

1989ರಲ್ಲಿ ಈ ಜಿಲ್ಲೆಯ 15 ರಲ್ಲಿ 14 ಸ್ಥಾನಗಳನ್ನು ಕಾಂಗ್ರೆಸ್(ಐ) ಪಡೆದಿತ್ತು. ಉಳಿದ ಒಂದು ಸ್ಥಾನ ಬಿಜೆಪಿಗೆ ದೊರಕಿತ್ತು. ಈ ಬಾರಿ ಬಿಜೆಪಿಯು ಜಿಲ್ಲೆಯ ಅರ್ಧದಷ್ಟು ಸ್ಥಾನಗಳನ್ನು ಪಡೆದಿದೆ. ಕಳೆದ ಬಾರಿ ಒಂದೂ ಸ್ಥಾನ ಪಡೆದಿರದ ಜನತಾದಳ ಮೂರು ಸ್ಥಾನಗಳನ್ನು ಕಾಂಗ್ರೆಸ್(ಐ)ನಿಂದ ಕಿತ್ತುಕೊಂಡಿದೆ.

ಆದರೆ ಗಮನಾರ್ಹ ವಿಷಯವೆಂದರೆ ಅದು ಪಡೆದ ಒಟ್ಟು ಮತಗಳು 8 ಲಕ್ಷದಷ್ಟು ಕಡಿಮೆಯಾಗಿದೆ. ಸುಮಾರು ಶೇ. 11 ಬಹಳಷ್ಟು ಕಡೆ (8) ಠೇವಣಿ ನಷ್ಟವಾಗಿದೆ.

| ಬಲಾಬಲ | ಕಾಂಗ್ರೆಸ್(ಐ) | ಕೆ.ಸಿ.ಪಿ. | ಜನತಾದಳ | ಬಿಜೆಪಿ |
|---|---|---|---|---|
| ಗೆದ್ದ ಸ್ಥಾನಗಳು | 4 | 1 | 3 | 7 |
| 2ನೇ ಸ್ಥಾನಗಳು | 9 | - | 1 | 5 |
| 3ನೇ ಸ್ಥಾನ | 2 | 2 | 6 | 3 |
| 4ನೇ ಸ್ಥಾನ | - | 9 | 5 | - |
| ಠೇವಣಿ ನಷ್ಟ | - | 14 | 8 | 1 |
| **ಗೆಲುವಿನ ಅಂತರ** | | | | |
| 1000ಕ್ಕಿಂತ ಕಮ್ಮಿ | 1 | - | - | 1 |
| 1-2 ಸಾವಿರ | 1 | - | - | - |
| 2-5 ಸಾವಿರ | 2 | 1 | - | 1 |
| 5-10 ಸಾವಿರೆ | - | - | 1 | 3 |
| 10-20 ಸಾವಿರ | 1 | - | 2 | 2 |
| **ಮತಗಳ ಶೇಕಡಾ** | | | | |
| 1989ರಲ್ಲಿ | 45.3 | - | 27.6 | 18.3 |
| 1994ರಲ್ಲಿ | 33.3 | 7.3 | 19.0 | 35.0 |

ಇದಲ್ಲದೆ 1989 ರಲ್ಲಿ ಜನತಾ ಪಾರ್ಟಿ ಶೇ. 2 ಮತ ಪಡೆದಿತ್ತು.

### ಉತ್ತರ ಕನ್ನಡ

ಕಳೆದ ಬಾರಿ 2ರಲ್ಲಿ 5 ಸ್ಥಾನ ಪಡೆದಿದ್ದ ಕಾಂಗ್ರೆಸ್(ಐ) ಈ ಬಾರಿ ಎಲ್ಲಾ ಸ್ಥಾನಗಳನ್ನು ಕಳಕೊಂಡಿದೆ. ಕಳೆದ ಬಾರಿ ಒಂದೂ ಸ್ಥಾನ ಪಡೆಯದ ಬಿಜೆಪಿ ಅತೀ ಹೆಚ್ಚು ಸ್ಥಾನಗಳನ್ನು ಪಡೆದಿದೆ. ಆದರೆ ಠೇವಣಿ ನಷ್ಟದಲ್ಲೂ ಅದು ಹಿಂದಿಲ್ಲ!

| ಬಲಾಬಲ | ಕಾಂಗ್ರೆಸ್(ಐ) | ಕೆಸಿಪಿ | ಜನತಾದಳ | ಬಿಜೆಪಿ |
|---|---|---|---|---|
| ಗೆದ್ದ ಸ್ಥಾನಗಳು | - | 1 | 2 | 3 |
| 2ನೇ ಸ್ಥಾನ | 3 | - | 2 | 1 |
| 3ನೇ ಸ್ಥಾನ | 1 | 2 | 1 | 2 |
| 4ನೇ ಸ್ಥಾನ | 2 | 3 | 1 | - |
| ಠೇವಣಿ ನಷ್ಟ | 1 | 3 | 2 | 2 |
| **ಗೆಲುವಿನ ಅಂತರ** | | | | |
| 1000ಕ್ಕಿಂತ ಕಮ್ಮಿ | - | - | - | - |
| 1-2ಸಾವಿರ | - | - | 1 | 1 |
| 2-5ಸಾವಿರ | - | - | - | 1 |
| 5-10ಸಾವಿರ | - | - | - | - |
| 10-20 ಸಾವಿರ | - | 1 | - | - |
| 20 ಸಾವಿರಕ್ಕೂ ಹೆಚ್ಚು | - | - | 1 | 1 |
| **ಮತಗಳ ಶೇಕಡಾ** | | | | |
| 1989ರಲ್ಲಿ | 43.2 | - | 34.2 | 8.7 |
| 1994ರಲ್ಲಿ | 23.3 | 18.1 | 28.8 | 27.7 |

ಇದಲ್ಲದೆ 1989ರಲ್ಲಿ ಜನತಾಪಕ್ಷ 5.6 ಶೇ. ಮತ ಪಡೆದಿತ್ತು. ಅಂದರೆ ಈಗಿನ ಜನತಾದಳಕ್ಕೆ 11ಶೇ. ದಷ್ಟು ಮತಗಳಲ್ಲಿ ಕಡಿತ

### ಕೊಡಗು

1989ರಲ್ಲಿ ಮೂರು ಸ್ಥಾನಗಳನ್ನು ಕಾಂಗ್ರೆಸ್(ಐ) ಪಡೆದಿತ್ತು. ಈ ಬಾರಿ ಎಲ್ಲವೂ ಬಿಜೆಪಿ ಪಾಲಿಗೆ. ಬಿಜೆಪಿ ಮತಗಳಲ್ಲಿ ಶೇ. ೧೬ ರಷ್ಟು ಹೆಚ್ಚಳವಾಗಿದೆ.

| ಬಲಾಬಲ | ಕಾಂಗ್ರೆಸ್(ಐ) | ಕೆಸಿಪಿ | ಜನತಾದಳ | ಬಿಜೆಪಿ |
|---|---|---|---|---|
| ಗೆದ್ದ ಸ್ಥಾನಗಳು | - | - | - | 3 |
| 2ನೇ ಸ್ಥಾನ | 1 | - | 2 | - |
| 3ನೇ ಸ್ಥಾನ | 2 | - | 1 | - |
| 4ನೇ ಸ್ಥಾನ | - | 2 | - | - |
| ಠೇವಣಿ ನಷ್ಟ | - | 3 | - | - |
| **ಗೆಲುವಿನ ಅಂತರ** | | | | |
| 1-2 ಸಾವಿರ | - | - | - | 1 |
| 2-5ಸಾವಿರ | - | - | - | - |
| 5-10 ಸಾವಿರ | - | - | - | 1 |
| 10-20ಸಾವಿರ | - | - | - | 1 |
| **ಮತಗಳ ಶೇಕಡಾ** | | | | |
| 1989ರಲ್ಲಿ | 46.3 | - | 16.8 | 22.5 |
| 1994ರಲ್ಲಿ | 26.4 | 1.5 | 30.8 | 38.8 |

1989ರಲ್ಲಿ ಜನತಾ ಪಕ್ಷ 11ಶೇ. ಮತ ಪಡೆದಿತ್ತು. ಅಂದರೆ ಈಗಿನ ಜನತಾದಳಕ್ಕೆ ಸುಮಾರು ಶೇ. 3ರಷ್ಟು ಹೆಚ್ಚು ಮತ ದೊರತಂತಾಗಿದೆ.

### ಶಿವಮೊಗ್ಗ

1989ರಲ್ಲಿ 7ನೇ ಸ್ಥಾನ ಗಿಟ್ಟಿಸಿದ್ದ ಕಾಂಗ್ರೆಸ್(ಐ) ಈ ಬಾರಿ ಒಂದೇ ಸ್ಥಾನ ಪಡೆದಿದೆ. ಬಿಜೆಪಿಯ ಸೀಟುಗಳು 2ರಿಂದ 4 ಆಗಿವೆ. ಜನತಾದಳವೂ ಒಂದರ ಬದಲು ಈ ಬಾರಿ ಎರಡು ಸೀಟುಗಳನ್ನು ಪಡೆದಿದೆ. ಆದರೆ ಅದರ ಮತಗಳಲ್ಲಿ ಮಾತ್ರ ಕುಸಿತವಾಗಿದೆ. ಶೇ. 10ರಷ್ಟು ಬಿಜೆಪಿ ಮತಗಳು ದ್ವಿಗುಣಗೊಂಡಿವೆ. ಆದರೆ 4 ಸ್ಥಾನಗಳಲ್ಲಿ ಅದು ಠೇವಣಿ ಕಳೆದುಕೊಂಡಿರುವುದೂ ಗಮನಾರ್ಹ. ಬಂಗಾರಪ್ಪನವರ ಜಿಲ್ಲೆಯಲ್ಲೇ ಅವರ ಪಕ್ಷ 8 ಕಡೆ ಠೇವಣಿ ಕಳಕೊಂಡಿದೆ. ಒಂದು ಸ್ಥಾನವನ್ನು ಪಕ್ಷೇತರರು ಪಡೆದಿದ್ದು ಎರಡು ಕಡೆ ಪಕ್ಷೇತರರೇ ಎರಡನೇ ಸ್ಥಾನದದಲ್ಲಿರುವುದು ಇನ್ನೊಂದು ವೈಶಿಷ್ಟ್ಯ.

| ಬಲಾಬಲ | ಕಾಂಗ್ರೆಸ್(ಐ) | ಕೆ.ಸಿ.ಪಿ. | ಜನತಾದಳ | ಬಿಜೆಪಿ |
|---|---|---|---|---|
| ಗೆದ್ದ ಸ್ಥಾನಗಳು | 1 | 2 | 2 | 4 |
| 2ನೇ ಸ್ಥಾನ | 3 | - | 4 | 1 |
| 3ನೇ ಸ್ಥಾನ | 2 | 1 | 2 | 2 |
| 4ನೇ ಸ್ಥಾನ | 4 | 1 | - | 2 |
| ಠೇವಣಿ ನಷ್ಟ | 4 | 8 | 3 | 4 |
| **ಗೆಲುವಿನ ಅಂತರ** | | | | |
| 1000ಕ್ಕಿಂತ ಕಮ್ಮಿ | - | - | - | 1 |
| 1-2 ಸಾವಿರ | - | - | 1 | - |
| 2-5 ಸಾವಿರ | - | - | - | 1 |
| 5-10 ಸಾವಿರ | 1 | - | 1 | - |
| 10-20 ಸಾವಿರ | - | - | - | 1 |
| **ಮತಗಳ ಶೇಕಡಾ** | | | | |
| 1989ರಲ್ಲಿ | 41.7 | - | 25.9 | 12.6 |
| 1994ರಲ್ಲಿ | 19.9 | 18.0 | 20.6 | 26.0 |

1989ರಲ್ಲಿ ಜನತಾ ಪಕ್ಷ ಪಡೆದದ್ದು ಶೇ. 6.8

### ಚಿಕ್ಕಮಗಳೂರು

1989ರಲ್ಲಿ ಎಲ್ಲಾ 6 ಸ್ಥಾನಗಳಲ್ಲಿ ಗೆದ್ದಿದ್ದ ಕಾಂಗ್ರೆಸ್(ಐ) ಕೇವಲ ಒಂದು ಸ್ಥಾನ ಉಳಿಸಿಕೊಂಡಿದೆ. ಜನತಾದಳ 4 ಸೀಟುಗಳನ್ನು ಗಿಟ್ಟಿಸಿದರೂ ಮತಗಳ ಶೇಕಡಾವಾರು ಹೆಚ್ಚಿಲ್ಲ.

ಜನತಾಪಾರ್ಟಿಯ ಮತಗಳನ್ನು ಗಮನಕ್ಕೆ ತಗೊಂಡರೆ ಶೇ. 1 ಕಮ್ಮಿಯೇ ಆಗಿದೆ. ಕೆ.ಸಿ.ಪಿ. ಎಲ್ಲಾ ಕಡೆ ಠೇವಣಿ ಕಳಕೊಂಡಿದೆ. ಬಿಜೆಪಿಗೆ 2 ಕಡೆ ಠೇವಣಿ ನಷ್ಟ, 2 ಕಡೆ ನಾಲ್ಕನೇ ಸ್ಥಾನದಲ್ಲಿದ್ದು ಈ ವಲಯದಲ್ಲಿ ಅತೀ ಕಮ್ಮಿ ಮತ ಪಡೆದ ಜಿಲ್ಲೆ, ಆದರೂ ಅದರ ಮತಗಳಲ್ಲಿ ಗಮನಾರ್ಹ ಹೆಚ್ಚಳವಾಗಿದೆ.

| ಬಲಾಬಲ | ಕಾಂಗ್ರೆಸ್(ಐ) | ಕೆ.ಸಿ.ಪಿ. | ಜನತಾದಳ | ಬಿಜೆಪಿ |
|---|---|---|---|---|
| ಗೆದ್ದ ಸ್ಥಾನಗಳು | 1 | - | 4 | - |
| 2ನೇ ಸ್ಥಾನ | 3 | - | 1 | 1 |
| 3ನೇ ಸ್ಥಾನ | 2 | - | 1 | 3 |
| 4ನೇ ಸ್ಥಾನ | - | 4 | - | 2 |
| ಠೇವಣಿ ನಷ್ಟ | - | 6 | - | 2 |
| **ಗೆಲುವಿನ ಅಂತರ** | | | | |
| 1-2ಸಾವಿರ | 1 | - | - | - |
| 2-5 ಸಾವಿರ | - | - | 1 | - |
| 5-10ಸಾವಿರ | - | - | 1 | - |
| 10-20ಸಾವಿರ | - | - | 1 | - |
| 20ಸಾವಿರಕ್ಕಿಂತ ಹೆಚ್ಚು | - | - | 1 | - |

ಪುಟ 6 ಕ್ಕೆ

## ಜನವರಿ 1ರಂದು ಕ್ಯೂಬಾ ಕ್ರಾಂತಿ ದಿನದ ಸಂದರ್ಭದಲ್ಲಿ ಒಂದು ನೆನಪು

# ಕ್ಯೂಬಾ ಕ್ರಾಂತಿ: ನಮ್ಮ ಕಾಲದ ಅತ್ಯುತ್ತಮ ಮೌಲ್ಯಗಳ ಪ್ರತೀಕ

“ಅಮೇರಿಕಾದ ಆಳರಸರು ಜನವರಿ 1, 1959ರವರೆಗೂ ನಮ್ಮನ್ನು ತಮ್ಮ ಸ್ವತ್ತಾಗಿಯೇ ಕಂಡಿದ್ದರು. ನಾವು ನಾವಾಗಿ ಇರುವುದನ್ನು ಬಹುಶಃ ಈಗಲೂ ಅವರು ಒಪ್ಪಿಕೊಳ್ಳಲು ಸಿದ್ಧರಿಲ್ಲ. ನಾವು ಸ್ವತಂತ್ರ ದೇಶವಾಗಿಯೇ ಉಳಿಯುವುದನ್ನು ಒಪ್ಪಲು ಅವರಿನ್ನೂ ಸಿದ್ಧರಿಲ್ಲ. ಅಮೇರಿಕಾದ ಈ ಧೋರಣೆ ಶೀತ ಸಮರ ಆರಂಭವಾಗುವ ಎಷ್ಟೋ ಮೊದಲಿಂದಲೇ ಇದೆ”-ಎಂದರು ಜನತೆಗಳೊಂದಿಗೆ ಮಿತ್ರತ್ವದ ಕ್ಯೂಬಾ ಸಂಸ್ಥೆಯ ಅಧ್ಯಕ್ಷ ಸರ್ಜಿಯೋ ಕೋರಿಯೆ.

“ಕ್ಯೂಬಾದಲ್ಲಿ 1961ರಲ್ಲೇ ಅನಕ್ಷರತೆಯನ್ನು ನಿರ್ಮೂಲಗೊಳಿಸಲಾಯಿತು. ಶಿಕ್ಷಣ ಇಲ್ಲೀಗ ಎಲ್ಲರಿಗೂ ಮುಕ್ತ. ಅದು ಮಾನವ ಜ್ಞಾನದ ಎಲ್ಲಾ ರಂಗಗಳನ್ನು ವ್ಯಾಪಿಸಿದೆ. 110 ಲಕ್ಷ ಜನಸಂಖ್ಯೆಯ ದೇಶದಲ್ಲಿ 30 ಲಕ್ಷ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. 47 ಉಚ್ಚ ಶಿಕ್ಷಣ ಸಂಸ್ಥೆಗಳಿವೆ. 20 ಲಕ್ಷಕ್ಕೂ ಹೆಚ್ಚು ಮಾಧ್ಯಮಿಕ ಶಿಕ್ಷಣ ಸಂಸ್ಥೆಗಳು, 501 ಅಂಗವಿಕಲ ಮಕ್ಕಳಿಗೆ ಹಾಗೂ ಇತರ ವಿಶೇಷ ಶಿಕ್ಷಣದ ಕೇಂದ್ರಗಳಿವೆ. 9ನೇ ತರಗತಿ ವರೆಗೆ ಶಿಕ್ಷಣ ಕಡ್ಡಾಯ. ಕ್ಯೂಬನ್ನರಲ್ಲಿ ಪ್ರತಿ 15 ದುಡಿಯುವ ಜನಗಳಿಗೆ ಒಬ್ಬನಂತೆ ಸ್ನಾತಕ ಪದವೀಧರ; ಪ್ರತಿ 5 ಕಾರ್ಮಿಕರಲ್ಲಿ ಇಬ್ಬರು ಮಧ್ಯಮ ಮಟ್ಟದ ತಂತ್ರಜ್ಞರು” ಹೀಗೆಂದವರು ಕ್ಯೂಬಾದ ಶಿಕ್ಷಣ ಮಂತ್ರಿ ಲೂಯಿ ಇಗ್ನೇಸಿಯೋ ಗೋಮೆಝ್

“ಅಮೇರಿಕನ್ ಕ್ರೀಡಾ ಸ್ಪರ್ಧೆಗಳಲ್ಲಿ ಕ್ಯೂಬಾ ಮೊದಲ ಸ್ಥಾನ ಪಡೆಯಿತು. ಬಾರ್ಸಿಲೋನಾ ಒಲಂಪಿಕ್‌ನಲ್ಲಿ 5ನೇ ಸ್ಥಾನ ಪಡೆಯಿತು. ಕ್ಯೂಬಾ ಕ್ರಾಂತಿಯ ನಂತರ ಆರೋಗ್ಯವಲಯದಲ್ಲಂತೂ ಭಾರೀ ಮುನ್ನಡೆ ಸಾಧಿಸಿದೆ. ಆರೋಗ್ಯ ಸೌಲಭ್ಯ ಎಲ್ಲಾ ಕ್ಯೂಬನ್ನರಿಗೆ ಪುಕ್ಕಟ್ಟೆ ಕಾಯಿಲೆ ಗುಣಪಡಿಸುವುದಕ್ಕಿಂತ ಕಾಯಿಲೆ ಬರದಂತೆ ತಡೆಯಲು ವಿಶೇಷ ಆದ್ಯತೆ ನೀಡಲಾಗಿದೆ. ಪ್ರತಿ 270 ನಿವಾಸಿಗಳಿಗೆ ಒಬ್ಬ ಡಾಕ್ಟರ್ ಇದ್ದಾರೆ. ಸರಾಸರಿ ಆಯುಸ್ಸು 75 ವರ್ಷ. ಹಸುಳೆಗಳ ಸಾವಿನ ದರ ಒಂದು ಸಾವಿರದಲ್ಲಿ 9.4 ಇಡೀ ಜಗತ್ತಿನಲ್ಲೇ ಅತಿ ಕಮ್ಮಿ. ಎಲ್ಲರಿಗೂ ವಸತಿ ಸೌಕರ್ಯವಿದೆ. ತಲೆಯ ಮೇಲೆ ಸೂರಿಲ್ಲದೆ, ಕೊಳಗೇರಿಗಳಲ್ಲಿ ವಾಸಿಸುವ ಕ್ಯೂಬನ್ನನೇ ಇಲ್ಲ”-ಎಂದರು ಸಾರ್ವಜನಿಕ ಆರೋಗ್ಯ ಮಂತ್ರಿ ಜ್ಯೂಲಿಯೋ ತೇಜಾನ್.

ಇದು ಜಗತ್ತಿನ ದೊಡ್ಡ ಸಾಮ್ರಾಜ್ಯಶಾಹಿ ಶಕ್ತಿಯಿಂದ ಕೇವಲ 90 ಕಿ.ಮೀ ದೂರದಲ್ಲಿರುವ ಪುಟ್ಟ ಕ್ಯೂಬಾ ಇಂದಿನಿಂದ ಸರಿಯಾಗಿ 36 ವರ್ಷಗಳ ಹಿಂದೆ ಕ್ರಾಂತಿ ನಡೆಸಿ, ಈಗ ಮೂರು ದಶಕಗಳಿಂದ ಆ ಬಲಾಢ್ಯ ಶಕ್ತಿಯ ದಿಗ್ಬಂಧನ, ಭಾರೀ ವೈಷಮ್ಯಗಳನ್ನು ಎದುರಿಸಿ ಸಾಧಿಸಿರುವ ಸಾಧನೆ. ಪೂರ್ವ ಯುರೋಪಿನ ಸಮಾಜವಾದಿ ದೇಶಗಳ, ಸೋವಿಯೆತ್ ಒಕ್ಕೂಟದ ವಿಘಟನೆಯ ನಂತರ ಇನ್ನೇನು ಕ್ಯೂಬಾದ ಕಥೆಯೇ ಮುಗಿಯಿತು ಎಂಬ ಸಾಮ್ರಾಜ್ಯಶಾಹಿಗಳಕ್ಯಾಬಾರವನ್ನು ತಲೆಕೆಳಗು ಮಾಡಿ ಸೆಡ್ಡು ಹೊಡೆದು ನಿಂತಿರುವ ಕ್ಯೂಬಾದ ಸಾಧನೆಗಳು.

### ಕ್ಯೂಬಾ ಕ್ರಾಂತಿಯ ಮಹತ್ವ

ನವೆಂಬರ್ 21ರಿಂದ 25ರವರೆಗೆ ಕ್ಯೂಬಾದ ರಾಜಧಾನಿ ಹವಾನಾದಲ್ಲಿ ನಡೆದ ಪ್ರಥಮ ವಿಶ್ವ ಕ್ಯೂಬಾ ಸೌಹಾರ್ದ ಸಭೆಯಲ್ಲಿ ಕ್ಯೂಬಾದ ಮುಖಂಡರುಗಳು. ಜಗತ್ತಿನ 109 ದೇಶಗಳಿಂದ ಬಂದ 3063 ಪ್ರತಿನಿಧಿಗಳ ಮುಂದೆ ಇಟ್ಟ ಕ್ಯೂಬಾದ ವಸ್ತುಸ್ಥಿತಿಯ ಒಂದು ಚಿತ್ರ. ಹಲವು ನೋಬೆಲ್ ಬಹುಮಾನ ವಿಜೇತರು, ಹಲವು ಸರಕಾರಗಳ ಪ್ರತಿನಿಧಿಗಳು, ಸಂಸದೀಯ ಪಟುಗಳು ಈ ಸೌಹಾರ್ದ ಸಭೆಯಲ್ಲಿ ಭಾಗವಹಿಸಿರುವುದೇ ಕ್ಯೂಬಾ ಕ್ರಾಂತಿಯ, ಈಗ ಆ ಕ್ರಾಂತಿಯನ್ನು ಉಳಿಸಿಕೊಳ್ಳಲು ಅದು ನಡೆಸುತ್ತಿರುವ ಧೀಮಂತ ಹೋರಾಟದ ಐತಿಹಾಸಿಕ ಮಹತ್ವವನ್ನು ಸಾರಿ ಹೇಳಿರುವ ಅಂಶ. ಅಮೇರಿಕಾದಿಂದಲೂ ಪ್ರತಿನಿಧಿಗಳ ಒಂದು ದೊಡ್ಡ ತಂಡವೇ ಈ ಸಭೆಯಲ್ಲಿ ಭಾಗವಹಿಸಿತ್ತು. ತಂಡದಲ್ಲಿ ಮಾಜಿ ಸಿ.ಐ.ಎ. ಹಾಗೂ ಭದ್ರತಾ ಸಿಬ್ಬಂದಿಯ ಸಂಘದ ಮುಖಂಡರೊಬ್ಬರು ಕೂಡಾ ಇದ್ದದ್ದು ಗಮನಾರ್ಹ. ಸಿಪಿಐ(ಎಂ) ಪರವಾಗಿ ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಭಾಗವಹಿಸಿದ್ದರು.

ಕ್ಯೂಬಾದ ಕ್ರಾಂತಿಯ ಯಶಸ್ಸಿಗೆ ಮೂಲ ಕಾರಣ ಪ್ರತಿಯೊಂದು ಪ್ರಕ್ರಿಯೆಯಲ್ಲೂ ಜನಗಳ ಸಂಪೂರ್ಣ ಹಾಗೂ ನೇರ ಭಾಗವಹಿಸುವಿಕೆ. ಅಂಗೋಲಾ, ಇಥಿಯೋಪಿಯಾ, ಅಲ್ಜೀರಿಯಾ, ಸಹರಾ, ವಿಯೆಟ್ನಾಂ, ನಿಕರಾಗುವಾ, ಯೆಮೆನ್‌ಗಳ ವಿಮೋಚನಾ ಹೋರಾಟಗಳಿಗೆ ಕ್ಯೂಬಾದ ನೆರವು ಹಾಗೂ ಸೌಹಾರ್ದ “ಅಂತರರಾಷ್ಟ್ರೀಯತೆಯನ್ನು ಪ್ರಜಾಪ್ರಭುತ್ವದ ಒಂದು ಪ್ರದರ್ಶನವಾಗಿ ಮಾಡುವುದು ಹೇಗೆ ಎಂಬುದು ಕ್ಯೂಬನ್ನರಿಗೆ ಗೊತ್ತು ಎಂದು ಸಾರಿದೆ”ಎಂದರು ಕ್ಯೂಬಾದ ರಾಷ್ಟ್ರೀಯ ಅಸೆಂಬ್ಲಿಯ ಅಧ್ಯಕ್ಷ ರಿಕಾರ್ಡೊ ಅಲರ್ಕೋನ್.

ಆದ್ದರಿಂದ ಕ್ಯೂಬಾದ ಜನತೆ ತಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೇಗೆ ಅಭಿವೃದ್ಧಿ ಪಡಿಸುವುದು, ಆಳಗೊಳಿಸುವುದು ಎಂದು ಚರ್ಚಿಸುವಾಗ ಅವರು ಪ್ರಜಾಪ್ರಭುತ್ವ ಆದರ್ಶಗಳ ಗುತ್ತೇದಾರರು ತಾವು ಮಾತ್ರ ಎನ್ನುತ್ತಾ ಈಗಿನ ಏಕಧ್ರುವ ಜಗತ್ತಿನಲ್ಲಿ ಬೇರೆ ದೇಶಗಳು ಹೇಗಿರಬೇಕು ಎಂದು ಆದೇಶ ನೀಡುವವರನ್ನು ಖುಷಿಪಡಿಸುವ ಬಗ್ಗೆ ಅವರಿಂದ ಸರ್ಟಿಫಿಕೇಟ್ ಪಡೆಯುವ ಬಗ್ಗೆ ಯೋಚಿಸುವುದಿಲ್ಲ” ಎಂದರು ಅವರು.

### ಬದಲಾದ ಸ್ಥಿತಿಯಲ್ಲಿ

ಸೋವಿಯೆತ್ ಒಕ್ಕೂಟದ ವಿಘಟನೆಯಿಂದ, ಪೂರ್ವ ಯುರೋಪಿನ ದೇಶಗಳ ಬಂಡವಾಳಶಾಹಿಯ ಮರುಸ್ಥಾಪನೆಯಿಂದ ಕ್ಯೂಬಾದ ಶೇ.85 ವಿದೇಶ ವ್ಯಾಪಾರ ಹಾಗೂ ಸಾಲದ ಮೂಲ ಬತ್ತಿಹೋಯಿತು. 30ವರ್ಷಗಳ ಆರ್ಥಿಕ ಸಂಬಂ



ಹೆಚ್ಚು ಮಹತ್ವಪೂರ್ಣವಾಗಿದೆ.

ಮುಂಬರುವ ದಿನಗಳಲ್ಲಿ ದಿಗ್ಬಂಧನ, ಸುಳ್ಳು ಆರೋಪಗಳಿಗೆ ಒಳಗಾಗಿರುವ ಕ್ಯೂಬಾ ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಸರಕಾರ ಮಿಯಾಮಿಯಲ್ಲಿ ಕರೆದಿರುವ ಶೃಂಗ ಸಭೆಯಲ್ಲಿ ಇರುವುದಿಲ್ಲ. ಕ್ಯೂಬಾದ ಧೀರ ದನಿ ನಿರ್ಲಕ್ಷಿತರ, ಎಲ್ಲಾ ಕಳೆಕೊಂಡವರ, ದೂರತಳ್ಳಲ್ಪಟ್ಟವರ, ನಿಸ್ಸಹಾಯಕರ ಪರವಾಗಿ ಮೊಳಗುತ್ತದೆ ಎಂಬ ಭಯ ಶೃಂಗಸಭೆಯ ಅತಿಥಿಗಳಿಗಿದೆ. ಆದರೆ ಕ್ಯೂಬಾ ಒಂಟಿಯಲ್ಲ, ಅದಕ್ಕೆ ಈ ಸಭೆಯೇ ಸಾಕ್ಷಿ. ಸುಯೋಗ್ಯ ದೇಶವನ್ನು ಬೆಂಬಲಿಸುವ ವಿಶ್ವದೆಲ್ಲೆಡೆಯ ಮಹಾನ್ ಮಾನವ ಕುಲದ ಒಂದು ಭಾಗವಷ್ಟೇ ಈ ಸಭೆಯಲ್ಲಿ ಬಂದಿದೆ.

ಸಮರಾಂಗಣದಲ್ಲಿ ಜೋಸ್ ಮಾರ್ತಿಯ ಸಾವಿನ ನೂರು ವರ್ಷಗಳನ್ನು ಕ್ಯೂಬಾ ಮತ್ತು ಇಡೀ ಲ್ಯಾಟಿನ್ ಅಮೇರಿಕಾ ಸ್ಮರಿಸಿಕೊಳ್ಳಲು ಸಿದ್ಧವಾಗುತ್ತಿರುವ ಸಂದರ್ಭದಲ್ಲಿ ನಮ್ಮ ವಿಶ್ವ ಸೌಹಾರ್ದ ಸಭೆ ನಡೆಯುತ್ತಿದೆ. ಮಾರ್ತಿಯವರಿಗೆ ಸದಾ ಕ್ಯೂಬಾದ ಸ್ವಾತಂತ್ರ್ಯ ಹೋರಾಟ “ನಮ್ಮ ಅಮೇರಿಕಾ”ದ ಭವಿಷ್ಯತ್ತಿನ ದೃಷ್ಟಿಯಿಂದ ಹಾಗೂ “ವಿಶ್ವ ಸಮತೋಲನ” ಸಾಧಿಸುವ ದೃಷ್ಟಿಯಿಂದ ಎಷ್ಟು ಮಹತ್ವದ್ದು ಎಂಬ ಅರಿವಿತ್ತು.

ಈ ದಿನಗಳಲ್ಲಿ ಮಾರ್ತಿಯವರ “ಇಂದು ಕ್ಯೂಬಾದೊಂದಿಗೆ ಎದ್ದು ನಿಲ್ಲುವವರೆಲ್ಲರೂ ಎಲ್ಲಾ ಕಾಲಗಳ ಪರವಾಗಿ ಎದ್ದು ನಿಲ್ಲುವರು” ಎಂಬ ಭವಿಷ್ಯವಾಣಿಯ ಮಹತ್ವ ಮಹಾನತೆ ಎದ್ದು ಕಾಣುತ್ತಿದೆ.

**ಕ್ಯೂಬಾದ ವಿರುದ್ಧ ದಿಗ್ಬಂಧನ ನಿಲ್ಲಬೇಕು!**

**ತನ್ನ ಭವಿಷ್ಯತ್ತನ್ನು ತಾನೇ ಕಟ್ಟುವ ಕ್ಯೂಬಾದ ಸಾರ್ವಭೌಮ ಹಕ್ಕನ್ನು ಮಾನ್ಯ ಮಾಡಬೇಕು.**


## “ಕ್ಯೂಬಾ ಒಂಟಿಯಲ್ಲ -ಜತೆಗೆ ನಾವಿದ್ದೇವೆ”

### 108 ದೇಶಗಳ 3072 ಪ್ರತಿನಿಧಿಗಳ ಘೋಷಣೆ

ನವೆಂಬರ್ 21ರಿಂದ 25ರವರೆಗೆ ಹವಾನಾದಲ್ಲಿ ನಡೆದ ಪ್ರಥಮ ವಿಶ್ವ ಕ್ಯೂಬಾ ಸೌಹಾರ್ದ ಸಭೆ ಮೂರು ಪ್ರತ್ಯೇಕ ಆಯೋಗಗಳಾಗಿ ವಿಭಾಗ ಮಾಡಿಕೊಂಡು (i) ಕ್ಯೂಬಾದ ವಿರುದ್ಧ ಹೇರಿರುವ ದಿಗ್ಬಂಧನದ ತೆರವಿನ ಬಗ್ಗೆ (ii) ಅಮೇರಿಕನ್ ಸಾಮ್ರಾಜ್ಯಶಾಹಿಯ ಸುಳ್ಳು ಪ್ರಚಾರ ಹಾಗೂ ಅದನ್ನು ಎದುರಿಸುವುದು ಹೇಗೆ ಎಂಬ ಬಗ್ಗೆ ಹಾಗೂ (iii) ಕ್ಯೂಬಾದೊಂದಿಗೆ ಸೌಹಾರ್ದ ಪ್ರಚಾರದ ಬಗ್ಗೆ ಪ್ರತ್ಯೇಕವಾಗಿ ವಿಶದವಾಗಿ ಚರ್ಚಿಸಿತು. ಇವುಗಳ ಆಧಾರದ ಮೇಲೆ ಸಂಘಟನಾ ಸಮಿತಿ ಒಂದು ಘೋಷಣಾ ಪತ್ರವನ್ನು ಅಂಗೀಕರಿಸಿತು. ಆ ಘೋಷಣೆ ಹೀಗಿದೆ.

ಹವಾನಾ ನಗರದಲ್ಲಿ ನವಂಬರ್ 21-25, 1994ರಲ್ಲಿ ಸಭೆ ಸೇರಿರುವ, ಐದು ಖಂಡಗಳ 108 ದೇಶಗಳನ್ನು ಹಾಗೂ ಐದು ಪ್ರಾದೇಶಿಕ ಮತ್ತು ಅಂತರರಾಷ್ಟ್ರೀಯ ಸಂಘಟನೆಗಳನ್ನು ಪ್ರತಿನಿಧಿಸುತ್ತಾ ವಿಶ್ವ ಕ್ಯೂಬಾ ಸೌಹಾರ್ದ ಸಮ್ಮೇಳನದಲ್ಲಿ ಭಾಗವಹಿಸುತ್ತಿರುವ ನಾವು 3072 ಮಂದಿ ಕ್ಯೂಬಾ ತನ್ನ ಅಗತ್ಯ ಹಾಗೂ ಚಾರಿತ್ರಿಕ ಪ್ರಕ್ರಿಯೆಗನುಗುಣವಾಗಿ ಹೊರಗಿನಿಂದ ಮಧ್ಯಪ್ರವೇಶವಿಲ್ಲದೆ ತನ್ನ ಭವಿಷ್ಯದ ಬಗ್ಗೆ ತಾನೇ ದುಡಿಯುವ ಸಾರ್ವಭೌಮ ಹಕ್ಕನ್ನು ರಕ್ಷಿಸುವುದಾಗಿ ಘೋಷಿಸುತ್ತೇವೆ. ಹೀಗೆ ರಕ್ಷಿಸುವುದರ ಅರ್ಥ ವಿಶ್ವಾದ್ಯಂತ ಹೇರಲಾಗುತ್ತಿರುವ ರಾಜಕೀಯ ಹಾಗೂ ಆರ್ಥಿಕ ಕುರುಡು ನಂಬಿಕೆಗಳಿಗೆ ಎದುರಾಗಿ ತಮ್ಮೆದುರು ಇರುವ ಹಲವು ದಾರಿಗಳಲ್ಲಿ ಒಂದನ್ನು ಆರಿಸುವ ಒಂದು ದೇಶದ ಹಕ್ಕನ್ನು ರಕ್ಷಿಸುವುದು ಎಂದರ್ಥ.

ಕ್ಯೂಬಾಕ್ಕೆ ವಿಶ್ವದ ಇತರರೊಡನೆ ಮುಕ್ತವಾಗಿ ವ್ಯಾಪಾರ ನಡೆಸುವ ಅವಕಾಶಗಳನ್ನು ನಿರಾಕರಿಸಲಾಗುತ್ತಿದೆ, ತನ್ನ ಆರ್ಥಿಕವನ್ನು ಮತ್ತೆ ಕಟ್ಟುವ ಅದರ ಎಲ್ಲಾ ಪ್ರಯತ್ನಗಳಿಗೆ ಅಡ್ಡಿಯುಂಟುಮಾಡಲಾಗುತ್ತಿದೆ, ಕ್ಯೂಬಾದಲ್ಲಿನ ವಾಸ್ತವತೆಯ ಬಗ್ಗೆ ವ್ಯವಸ್ಥಿತವಾಗಿ ತಪ್ಪಾಗಿ, ವಿಕೃತಗೊಳಿಸಿ ತೋರಲಾಗುತ್ತಿದೆ ಎಂದು ನಮ್ಮ ಚರ್ಚೆಗಳಲ್ಲಿ, ಜನರೊಂದಿಗೆ ನೇರ ಸಂಪರ್ಕದ ಕಾಲದಲ್ಲಿ ನಮಗೆ ಮತ್ತೊಮ್ಮೆ ಮನದಟ್ಟಾಗಿದೆ. ದಿಗ್ಬಂಧನ ಕ್ಯೂಬಾದ ಜನತೆಯ ಮೇಲೆ ಎಂತಹ ಕ್ರೂರ ಪರಿಣಾಮಗಳನ್ನು ಬೀರಿದೆ ಎಂದು ನಾವು ನಮ್ಮ ಕಣ್ಣಿನಿಂದಲೇ ನೋಡಿದ್ದೇವೆ. ಆದ್ದರಿಂದಲೇ ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಸರಕಾರ ವಿಶ್ವ ಸಾರ್ವಜನಿಕ ಅಭಿಪ್ರಾಯದ ಬಹುಭಾಗದ, ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯ ಒತ್ತಾಯಗಳಿಗೆ ಕಿವಿಗೊಟ್ಟು ಈಗ ಮೂವತ್ತು ವರ್ಷಗಳಿಂದಲೂ ಹೆಚ್ಚು ಕಾಲದಿಂದ ಇರುವ ಅಸಮರ್ಥನೀಯ ಕ್ರಮವನ್ನು ಕೊನೆಗೊಳಿಸಬೇಕು ಎಂದು ಒತ್ತಿ ಕೇಳುತ್ತೇವೆ. ಕ್ಯೂಬಾದ ಜನತೆಯ ಚೇತನವನ್ನು, ಪ್ರತಿರೋಧಿಸುವ ಅದಮ್ಯ ಬಯಕೆಯನ್ನು ಹಾಗೂ ತಮ್ಮ ಸಾಮಾಜಿಕ ಸಾಧನೆಗಳನ್ನು ಉಳಿಸಿಕೊಳ್ಳುವ ದೃಢ ನಿರ್ಧಾರವನ್ನು ಕಣ್ಣಾರೆ ನೋಡಿದ್ದೇವೆ. ಕ್ಯೂಬಾಕ್ಕಾಗಿ ಕೆಲಸ ಮಾಡುವ ಅಗತ್ಯ ಇದೆ ಎಂಬ ಬಗ್ಗೆ ನಮಗೆ ಈಗ ಇನ್ನೂ




ಆಧಾರ
ಕಾಂ. ಹರ್ಕಿಶನ್ ಸಿಂಗ್ ಸುರ್ಜಿತ್‌ರವರ
An Outline History of the Communist Movement in India

ಸಂಗ್ರಹ-ಅನುವಾದ: ವಿಶ್ವ

## ಅಧ್ಯಾಯ 18

# 12ನೇ ಮಹಾಧಿವೇಶನ ಮತ್ತು ಆನಂತರ

1985 ಡಿಸೆಂಬರ್‌ನಲ್ಲಿ ಕಲ್ಕತ್ತದಲ್ಲಿ ನಡೆದ ಪಕ್ಷದ 12ನೇ ಮಹಾಧಿವೇಶನದ ರಾಜಕೀಯ-ಸಂಘಟನಾತ್ಮಕ ವರದಿ ದೇಶದಲ್ಲಿ ಕೋಮುಶಕ್ತಿಗಳು ಹೆಚ್ಚುತ್ತಿರುವ ವಿಚಾರವನ್ನು ಮತ್ತೆ ಪರಿಶೀಲಿಸಿತು.. ಕೋಮುವಾದದ ಪಿಡುಗು ವರ್ಗ ಮತ್ತು ಸಾಮೂಹಿಕ ಚಳುವಳಿಗಳು ಹಾಗೂ ರಾಷ್ಟ್ರೀಯ ಏಕತೆ ಮತ್ತು ಸಮಗ್ರತೆಗೆ ಭಂಗತರಲಿದೆ ಎಂದು 11 ನೇ ಮಹಾಧಿವೇಶನ ನೀಡಿದ ಎಚ್ಚರಿಕೆಯನ್ನು ಈ ವರದಿ ನೆನಪಿಸಿತು. ಹಿಂದೂ ಕೋಮುವಾದಿ ಸಂಘಟನೆಗಳು ರಾಮಜನ್ಮಭೂಮಿ ಮತ್ತು ಗಂಗಾಜಲ ಯಾತ್ರೆಗಳನ್ನು ಬಹುಸಂಖ್ಯಾತ ಹಿಂದೂ ಹಾಗೂ ಮತಾಂಧ ಭಾವನೆಗಳನ್ನು ಕೆರಳಿಸಲು ಬಳಸಿಕೊಂಡವು ಎಂಬುದನ್ನು ಗಮನಿಸಿತು.

ಅಮೆರಿಕ, ಕೆನಡಾ, ಬ್ರಿಟನ್ ಮತ್ತಿತರ ದೇಶಗಳು ಇಂಥ ಶಕ್ತಿಗಳಿಗೆ ಬೆಂಬಲ ನೀಡಿದ್ದನ್ನು ವರದಿಯಲ್ಲಿ ಗಮನಕ್ಕೆ ತರಲಾಯಿತು. ಸೌದಿ ಅರೇಬಿಯಾದಂಥ ಕೊಲ್ಲಿ ದೇಶಗಳಿಂದ ಬಂದ ಭಾರೀ ಪ್ರಮಾಣದ ಹಣ ಭಾರತದಲ್ಲಿನ ಮುಸ್ಲಿಂ ಮೂಲಭೂತವಾದಿಗಳಿಗೆ ನೇರವಾಗಿ ನೆರವಾಗುತ್ತಿತ್ತು. ಆಳುವ ಕಾಂಗ್ರೆಸ್ ಸರಕಾರದ ಸಮಯ ಸಾಧಕತನ ನೀತಿಗಳು ಕೂಡ ನಾನಾ ಕೋಮುಶಕ್ತಿಗಳ ಬಲವರ್ಧನೆಗೆ ಪ್ರತ್ಯಕ್ಷವಾಗೂ ಪರೋಕ್ಷವಾಗಿ ನೆರವು ನೀಡಿದವು.

ಈ ಅವಧಿಯಲ್ಲಿ ಸಾಮಾನ್ಯ ಹಿತಾಸಕ್ತಿಯ ವಿಷಯಗಳ ಮೇಲೆ ಕಾಂಗ್ರೇತರ ಪ್ರತಿಪಕ್ಷಗಳನ್ನು ಒಂದೆಡೆ ತರುವಲ್ಲಿ ನಮ್ಮ ಪಕ್ಷ ದೊಡ್ಡ ಪಾತ್ರ ವಹಿಸಿತು. ಕಾಂಗ್ರೆಸೇತರ ಪ್ರತಿಪಕ್ಷಗಳ ಪ್ರಥಮ ಸಭೆಗಳೂ ಮೇನಲ್ಲಿ ವಿಜಯವಾಡದಲ್ಲಿ ನಡೆಯಿತು. 1984ರ ಜನವರಿಗೆ ಇಂಥ ಇನ್ನೂ ನಾಲ್ಕು ಸಭೆಗಳು ನಡೆದವು. ಪಂಜಾಬ್ ಮತ್ತು ಕೇಂದ್ರ-ರಾಜ್ಯ ಸಂಭಂಧಗಳಂಥ ರಾಷ್ಟ್ರೀಯ ಮಹತ್ವದ ವಿಷಯಗಳನ್ನು ಈ ಸಭೆಗಳಲ್ಲಿ ಚರ್ಚಿಸಲಾಯಿತು. ದಾರಿದ್ರ್ಯ ಹಾಗೂ ನಿರುದ್ಯೋಗ ಹೆಚ್ಚಳಕ್ಕೆ ಕಾರಣವಾದ ಕಾಂಗ್ರೆಸ್ ಸರಕಾರದ ಜನ ವಿರೋಧಿ ನೀತಿಗಳ ವಿರುದ್ಧ ಒಂದು ಕ್ರಿಯಾಯೋಜನೆಯನ್ನು ಅಂಗೀಕರಿಸಲಾಯಿತು.

ಆದರೆ, ಕಾಂಗ್ರಸ್ಸೇತರ ಪಕ್ಷಗಳ ಸಭೆಗಳು ಕಾಂಗ್ರೆಸ್(ಐ)ನ ಏಕಸ್ವಾಮ್ಯ ಆಡಳಿತಕ್ಕೆ ಪರ್ಯಾಯವಲ್ಲ ಅಥವಾ ಕಾಂಗ್ರೇತರ ಪಕ್ಷಗಳಲ್ಲಿರುವ ಗಂಭೀರ ರಾಜಕೀಯ ಹಾಗೂ ಕಾರ್ಯಕ್ರಮಾತ್ಮಕ ಭಿನ್ನಾಭಿಪ್ರಾಯಗಳನ್ನು ಬಗೆ ಹರಿಸುವ ವೇದಿಕೆಯೂ ಅಲ್ಲ ಎಂದು ಸಿಪಿಐ(ಎಂ) ಸ್ಪಷ್ಟಪಡಿಸಿತು. ಏನಿದ್ದರೂ ಈ ಸಭೆಗಳು ಬಿಜೆಪಿಯ ರಾಜಕೀಯ ಧೋರಣೆಯನ್ನು ಬೆರ್ಪಡಿಸಲಾಗಿದೆ ಎಂಬುದನ್ನು ಸ್ಪಷ್ಟ ಪಡಿಸದವು. ಈ ಅವಧಿಯಲ್ಲಿ ಕೇಂದ್ರ ರಾಜ್ಯ ಸಂಬಂಧಪ್ರಶ್ನೆ ರಾಷ್ಟ್ರೀಯ ಮಹತ್ವವನ್ನು ಪಡೆಯಿತು. 1984 ಜನವರಿಯಲ್ಲಿ ಕಲ್ಕತ್ತದಲ್ಲಿ ನಡೆದ ಸಭೆಯಲ್ಲಿ 18 ರಾಜಕೀಯ ಪಕ್ಷಗಳು ಮತ್ತು

ಧಗಳು ಕಳಚಿಬಿದ್ದವು. ಇದೇ ಸಂದರ್ಭವನ್ನು ಬಳಸಿ ಅಮೇರಿಕಾ ನಿರ್ಬಂಧ ಹೇರಿ ಕ್ಯೂಬಾ ಶರಣಾಗುವಂತೆ ಮಾಡಲು ಸರ್ವಪ್ರಯತ್ನ ನಡೆಸಿದೆ. ಆದ್ದರಿಂದ ಕ್ಯೂಬಾ ಹೊಸ ಮಾರುಕಟ್ಟೆಗಳನ್ನು, ಹೊಸ ಆರ್ಥಿಕ ಭಾಗೀದಾರರನ್ನು ಹುಡುಕಿಕೊಂಡು ಹೊರಟಿದೆ. ವಿದೇಶೀ ಬಂಡವಾಳ ಹೂಡಿಕೆಗೆ ತನ್ನ ಆರ್ಥಿಕವನ್ನು ತೆರೆದಿದೆ."ಇದು ಪ್ರಸ್ತುತ ಪರಿಸ್ಥಿತಿಯಲ್ಲಿ ಸಮಾಜವಾದೀ ಅಭಿವೃದ್ಧಿಯ ಕಾರ್ಯತಂತ್ರ" ಎಂದ ಕ್ಯೂಬೋ ಉಪಾಧ್ಯಕ್ಷ ಕಾರ್ಲೋಸ್ ಲಾಗೆ ಕ್ಯೂಬಾದ ಸಾಧನೆಗಳನ್ನು ಉಳಿಸಿಕೊಳ್ಳಲು ತನ್ನ ಸಮಾಜವಾದಿ ವ್ಯವಸ್ಥೆಯನ್ನು ಪ್ರಸ್ತುತ ಅಂತರರಾಷ್ಟ್ರೀಯ ಆರ್ಥಿಕ ಸಂಬಂಧಗಳಿಗೆ ಅನುಗುಣವಾಗಿಸಿಕೊಳ್ಳಲು ಇದು ಅಗತ್ಯ ಎಂದರು.



"ಕ್ಯೂಬಾ ಹೊಸ ಸನ್ನಿವೇಶದಲ್ಲಿ ತನ್ನ ಉತ್ಪಾದನಾ ಶಕ್ತಿಗಳನ್ನು ಹೆಚ್ಚಿಸಿಕೊಳ್ಳಲು ಈ ಬದಲಾವಣೆಗಳನ್ನು ಮಾಡಿದೆ. ಆದರೆ ಈ ಬದಲಾವಣೆಗಳು ನಮ್ಮನ್ನು ಯಾವುದೇ ರೀತಿಯಲ್ಲಿ ಸಮಾಜವಾದ ಕಟ್ಟುವ ದಾರಿಯನ್ನು ಬಿಡುವಂತೆ ಮಾಡುವ ಬದಲಾವಣೆಗಳಲ್ಲ" ಎಂದು ಕ್ಯೂಬಾ ಕ್ರಾಂತಿಯ ಮುಖಂಡ ಫಿಡೆಲ್ ಕಾಸ್ಟ್ರೋ ಕೂಡಾ ಸಮ್ಮೇಳನದ ಸಮಾರೋಪ ಭಾಷಣ ಮಾಡುತ್ತಾ ಹೇಳಿದರು.

"ನಾವೆಂದೂ ಬಂಡವಾಳಶಾಹಿಯತ್ತ ಹಿಂದಿರುಗುವುದಿಲ್ಲ, ಎಂದೆಂದೂ ಶರಣಾಗುವುದಿಲ್ಲ" ಗುಡುಗಿದರು ಫಿಡೆಲ್ ಕಾಸ್ಟ್ರೋ. ಸಮಾಜವಾದ ತಮಗೇನು ಮಾಡಿದೆ ಎಂಬ ಅರಿವು ಕ್ಯೂಬನ್ನರಿಗೆ ಇದೆ. ಈ ಸಮ್ಮೇಳನದಲ್ಲಿ ವ್ಯಕ್ತಗೊಂಡ ವಿಶ್ವ ಸೌಹಾರ್ದದ ನೆರವಿನೊಂದಿಗೆ ನಾವು ಈ ಕಷ್ಟಕರ ಅವಧಿಯನ್ನು ದಾಟುತ್ತೇವೆ. ಕ್ಯೂಬಾ ಒಬ್ಬ ವ್ಯಕ್ತಿಯಂತೆ ಒಗ್ಗಟ್ಟಿನಿಂದ ಎದ್ದು ನಿಲ್ಲುತ್ತದೆ. ತನ್ನ ಸಾರ್ವಭೌಮತೆಯನ್ನು ಪೂರ್ಣವಾಗಿ ಬದಲಾಯಿಸುವುದನ್ನು ಕ್ಯೂಬಾ ಎಂದೆಂದಿಗೂ ಬಿಟ್ಟುಕೊಡುವುದಿಲ್ಲ, ನಾವು ಸಾಯಲೂ ಸಿದ್ಧ ಆದರೆ ಎಂದೆಂದೂ ಸ್ವಯಂ ನಿರ್ಧಾರದ ಹಕ್ಕನ್ನು ಬಿಟ್ಟುಕೊಡುವುದಿಲ್ಲ" ಎಂದು ಫೆಡರಲ್ ಕ್ಯಾಸ್ಟ್ರೋ ಸಾರಿದರು.

ಕ್ಯೂಬಾದ ಕ್ರಾಂತಿಯೊಂದಿಗೆ ಸೌಹಾರ್ದ ಎಂದರೆ ಸ್ವಾತಂತ್ರ್ಯಕ್ಕಾಗಿ, ವಸಾಹತುಶಾಹಿ ವಿರುದ್ಧ, ನವ ವಸಾಹತುಶಾಹಿ ವಿರುದ್ಧ, ಸಾಮ್ರಾಜ್ಯಶಾಹಿ ವಿರುದ್ಧ, ಸಮಾನತೆಗಾಗಿ, ಸಾಮಾಜಿಕ ನ್ಯಾಯಕ್ಕಾಗಿ, ಶೋಷಣೆ, ಅನಕ್ಷರತೆ, ಘನತೆ ಹಾಗೂ ಸಮಾನತೆಗಾಗಿ ನಡೆಯುವ ವಿಶ್ವ ವ್ಯಾಪಿ ಹೋರಾಟದೊಂದಿಗೆ, ಒಂದೇ ಮಾತಲ್ಲಿ ಹೇಳುವುದಾದರೆ ನಮ್ಮ ಕಾಲದ ಮಾನವ ಕುಲದ ಅತ್ಯುತ್ತಮ ಮೌಲ್ಯಗಳೊಂದಿಗೆ ಸೌಹಾರ್ದ ಎಂದೇ ಅರ್ಥ ಎಂಬ ಕ್ಯಾಸ್ಟ್ರೋ ಉದ್ಗಾರವನ್ನು ವಿಶ್ವದ ಎಲ್ಲಾ ಪ್ರಜಾಪ್ರಭುತ್ವವಾದಿಗಳೂ ಈಗ ಒಪ್ಪಿರುತ್ತಾರೆ.

### ಪ್ರಥಮ ವಿಶ್ವ ಕ್ಯೂಬಾ ಸೌಹಾರ್ದ ಸಭೆಯ ಒಪ್ಪಂದ

*1. 1995ನ್ನು ಜೋಸ್ ಮಾರ್ತಿಯ ವರ್ಷ, ದಿಗ್ಬಂಧನ ವಿರುದ್ಧ ಹೋರಾಟದ ಅಂತರರಾಷ್ಟ್ರೀಯ ವರ್ಷ ಎಂದು ಘೋಷಿಸುವುದು.*

*2. ಜೋಸ್ ಮಾರ್ತಿ ಸಮರದಲ್ಲಿ ಸಾವನಪ್ಪಿ ನೂರು ವರ್ಷ ಸಲ್ಲುವ ಮೇ 19, 1995ನ್ನು ಜೋಸ್ ಮಾರ್ತಿ ಹಾಗೂ ಕ್ಯೂಬಾ ಬೆಂಬಲ ದಿನವಾಗಿ ಆಚರಿಸುವುದು.*

*3. ಕ್ಯೂಬಾದೊಂದಿಗೆ ಸೌಹಾರ್ದದ ರಾಷ್ಟ್ರೀಯ ಹಾಗೂ ಪ್ರಾದೇಶಿಕ ಸಭೆಗಳನ್ನು ಮುಂದುವರಿಸುವುದು, ಮಿತ್ರತ್ವ ಬಯಸುವ ಎಲ್ಲಾ ಗುಂಪುಗಳು, ಶಕ್ತಿಗಳು ಭಾಗವಹಿಸುವಂತೆ ಮಾಡಿ ಅವನ್ನು ಉತ್ತಮ ಗೊಳಿಸುವುದು.*

*4. ಮಿಯಾಮಿಯಲ್ಲಿ ಅಮೇರಿಕಾ ಸರಕಾರ ಸಂಘಟಿಸುತ್ತಿರುವ ಗೋಳಾರ್ಧ ಶೃಂಗಸಭೆಯಿಂದ ಕ್ಯೂಬಾವನ್ನು ಹೊರಗಿಟ್ಟಿರುವುದನ್ನು ಪ್ರತಿಭಟಿಸುವುದು.*

*5. ಕ್ಯೂಬಾದೊಂದಿಗೆ ಸೌಹಾರ್ದತೆಯ ಅಭಿವ್ಯಕ್ತಿಯಾಗಿ ಕೊಡುಗೆಗಳು ಹಾಗೂ ಆರ್ಥಿಕ ನೆರವು ಪ್ರಚಾರಗಳನ್ನು ಮುಂದುವರಿಸುವುದು, ಹೆಚ್ಚಿಸುವುದು.*

*6. ಸೌಹಾರ್ದ ಆಂದೋಲನ ಬೆಳೆಯಲು, ಪ್ರತಿಯೊಂದು ಸಮಾಜದ ಪ್ರತಿಯೊಂದು ವಲಯಕ್ಕೆ ಅದನ್ನು ವಿಸ್ತರಿಸಲು, ಕ್ಯೂಬಾದೊಂದಿಗೆ ವಿನಿಮಯ, ಭೇಟಿಗಳಿಗೆ, ಆ ದೇಶದಲ್ಲಿ ಬಂಡವಾಳ ಹೂಡಿಕೆ, ಪ್ರವಾಸೋದ್ಯಮ ನಡೆಸಲು ಪ್ರೋತ್ಸಾಹ ನೀಡುವುದು.*

*7. ಕ್ಯೂಬಾದ ಜನತೆಯ ಕ್ರಾಂತಿಕಾರಿ ಹೋರಾಟ ಆರಂಭವಾದ ಅಕ್ಟೋಬರ್ ೧೦ನ್ನು ವಿಶ್ವ ಕ್ಯೂಬಾ ಸೌಹಾರ್ದ ದಿನವಾಗಿ ಘೋಷಿಸುವುದು.*

ಐವರು ಮುಖ್ಯಮಂತ್ರಿಗಳು ಪಾಲ್ಗೊಂಡಿದ್ದರು.

ಜನರ ತೀರ್ಪನ್ನು ವಿಫಲಗೊಳಿಸಲು ಹಾಗೂ ಪ್ರಜಾಸ್ವಾತಂತ್ರ್ಯ ಸಂಸ್ಥೆಗಳನ್ನು ನಾಶಮಾಡಲು ಕಾಂಗ್ರೆಸ್(ಐ) ನಡೆಸುವ ಪ್ರಯತ್ನಗಳ ಬಗ್ಗೆ ಎಲ್ಲಾ ಸ್ವಾತಂತ್ರ್ಯ ಹಾಗೂ ಪ್ರಜಾಪ್ರಭುತ್ವ ಪ್ರೇಮಿಗಳು ಎಚ್ಚರದಿಂದಿರಬೇಕೆಂದು ಕರೆ ಕೊಡುವ ಗೊತ್ತುವಳಿಯೊಂದನ್ನು ಈ ಸಭೆ ಅಂಗೀಕರಿಸಿತು.

ಕಲ್ಕತ್ತ ಸಭೆ 1983ರ ಮೇ ತಿಂಗಳಿನಲ್ಲಿ ಆರಂಭವಾದ ಪ್ರಕ್ರಿಯೆಯಲ್ಲಿ ಒಂದು ಮಹತ್ವದ ಬದಲಾವಣೆಯ ಘಟ್ಟವಾಗಿತ್ತು, ಕೆಲವು ವಿಷಯಗಳನ್ನು ಚರ್ಚಿಸುವುದಷ್ಟಕ್ಕೆ ಈ ಸಭೆ ಸೀಮಿತವಾಗಿರಲಿಲ್ಲ, ಜನರನ್ನು ಬಾದಿಸುತ್ತಿರುವ ತುರ್ತು ಸಮಸ್ಯೆಗಳ ಆಧಾರದಲ್ಲಿ 11 ಅಂಶಗಳ ಬೇಡಿಕೆ ಪಟ್ಟಿಯನ್ನು ಹೋರಾಟಕ್ಕಿಳಿಯಲು ಕಲ್ಕತ್ತ ಸಭೆ ಕರೆ ನೀಡಿತು. 1984 ಜನವರಿ13ನ್ನು ರಾಷ್ಟ್ರ ವ್ಯಾಪಿ ಪ್ರತಿಭಟನಾ ದಿನವನ್ನಾಗಿ ಆಚರಿಸಲಾಯಿತು. ಜಂಟಿ ಹೋರಾಟಗಳ ಪಕ್ರಿಯೆಯನ್ನು ಪುನರಾಂಭಿಸಲು ಈ ಸಭೆಗಳಲ್ಲಿ ಮೂಡಿ ಬಂದ ಸಹಮತ ನೆರವಾಯಿತು. ನಮ್ಮ ಪಕ್ಷ ಈ ಸಭೆಗಳಲ್ಲಿ ಭಾಗವಹಿಸಿದ್ದರಿಂದ ಬಿಜೆಪಿ ಮತ್ತಿತರ ಕೋಮು ಹಾಗೂ ಛಿದ್ರಕಾರಿ ಶಕ್ತಿಗಳಿಂದ ಎಡ ಹಾಗೂ ಜಾತ್ಯಾತೀತ ಪಕ್ಷಗಳು ಪ್ರತ್ಯೇಕಿಸಿ ತೋರಿಸಲು ಸಾಧ್ಯವಾಯಿತು.

ಪಕ್ಷದ 12ನೇ ಮಹಾಧಿವೇಶನ ಪಶ್ಚಿಮ ಬಂಗಾಳ ಮತ್ತುತ್ರಿಪುರಾದ ಎಡರಂಗ ಸರಕಾರಗಳ ಪಾತ್ರವನ್ನು ಸಕಾರಾತ್ಮಕವಾಗಿ ಅಂದಾಜು ಮಾಡಿತು. ಸಿಪಿಐ(ಎಂ) ನೇತೃತ್ವದ ಈ ಸರಕಾರಗಳು 1977-1978ರಿಂದ ಅಸ್ತಿತ್ವದಲ್ಲಿದೆ. ಈ ಸರಕಾರಗಳು ದೇಶದಲ್ಲಿನ ಸಂಸದೀಯ ಪ್ರಜಾಪ್ರಭುತ್ವದ ರಕ್ಷಣೆಯ ಮುಂದುವರಿದ ಕಾವಲು ಗೋಪುರಗಳು ಎಂದೇ ಸಿಪಿಐ(ಎಂ) ಪರಿಗಣಿಸಿದೆ. ಜನರಿಗೆ ಪ್ರಾಮಾಣಿಕ ಸೇವೆ ಸಲ್ಲಿಸುವ ಈ ಸರಕಾರಗಳು ಶೋಷಿತ ಜನರ ನ್ಯಾಯಬದ್ಧ ಸಾಮಾಜಿಕ, ಆರ್ಥಿಕ,ಮತ್ತು ರಾಜಕೀಯ ಹೋರಟಗಳೊಂದಿಗೆ ತಮ್ಮನ್ನು ಗುರುತಿಸಿಕೊಂಡಿವೆ. ಮುಸ್ಲಿಂ ಅಲ್ಪಸಂಖ್ಯಾತರು ಮತ್ತು ಪರಿಶಿಷ್ಟ ಜಾತಿ ಜನರಿಗೆ ರಕ್ಷಣೆ ನೀಡಿವೆ, ಈ ರಾಜ್ಯಗಳಲ್ಲಿ ಕೋಮು ಘರ್ಷಣೆಗಳಿಲ್ಲ ಈ ಸರಕಾರಗಳನ್ನು ಉರುಳಿಸಲು ಕೇಂದ್ರದ ಕಾಂಗ್ರೆ ಸರಕಾರ ಗರಿಷ್ಟ ಪ್ರಯತ್ನ ಮಾಡಿತು. ಆದರೆ ಈ ಸರಕಾರಗಳ ಜನಹಿತ ಕಾರ್ಯಕ್ರಮಗಳು ಮತ್ತು ಪ್ರಜಾಪ್ರಭುತ್ವದ ರಕ್ಷಣೆ ಬಗ್ಗೆ ಭಾರತದ ಜನರಲ್ಲಿ ಹೆಚ್ಚುತ್ತಿರುವ ಜಾಗೃತಿಯಿಂದಾಗಿ ಈ ಪ್ರಯತ್ನ ವಿಫಲವಾಯಿತು. ರಾಜಕೀಯ ಶಕ್ತಿಗಳು ಎಡ ಮತ್ತು ಪ್ರಜಾಪ್ರಭುತ್ವದ ಶಕ್ತಿಗಳ ಪರವಾಗಿ ಒದಗುವಂತೆ ಈ ರಾಜ್ಯ ಸರಕಾರಗಳು ಕೆಲಸ ಮಾಡಬೇಕೆಂಬುದು ಪಕ್ಷದ ಅಭಿಮತವಾಗಿದೆ. ಎಡರಂಗ ಸರಕಾರಗಳು ಬಂಡವಾಳಶಾಹಿ ಭೂಮಾಲೀಕ ಪ್ರಭುತ್ವ ವ್ಯವಸ್ಥೆಯಡಿ ಕೆಲಸ ಮಾಡಬೇಕಾಗಿದೆ. ಈ ವ್ಯವಸ್ಥೆಯ ಮಿತಿಗಳೇನು ಎಂಬುದನ್ನು ಜನರು ತಮ್ಮ ನಿಜವಾದ ಅನುಭವದ ಮೂಲಕ ಮನವರಿಕೆ ಮಾಡಿಕೊಂಡಿದ್ದಾರೆ.

(ಮುಂದುವರೆಯುವುದು)

# ಪೇರು ಹಗರಣಕಾರರನ್ನು ಶಿಕ್ಷಿಸಿ ಎಂದ ಜನತೆ

ಐದು ಸಾವಿರ ಕೋಟಿಗೂ ಹೆಚ್ಚು ಹಣವನ್ನು ನುಂಗಿ ಹಾಕಿ ಷೇರು ಹಗರಣಕ್ಕೆ ಕಾರಣರಾದ ಹಗರಣಕಾರರನ್ನು ತೀವ್ರವಾಗಿ ಶಿಕ್ಷಿಸಬೇಕೆಂಬುದು ಜನರ ಇಚ್ಛೆಯಾಗಿದೆ ಟೈಮ್ಸ್ ಪತ್ರಿಕೆ ಮತ್ತು ಮೋಡ್ ಎಂಬ ಸಂಘಟನೆ ಜೊತೆ ಸೇರಿ ಸಮೀಕ್ಷೆಯೊಂದನ್ನು ನಡೆಸಿದವು 1565 ಜನರನ್ನು ಸಂದರ್ಶಿಸಿ ಅವರ ಅಭಿಪ್ರಾಯಗಳನ್ನು ಕೇಳಲಾಯಿತು. ಮುಂಬೈ, ದೆಹಲಿ, ಕಲ್ಕತ್ತ, ಮದ್ರಾಸ್, ಬೆಂಗಳೂರು ಮತ್ತು ಹೈದರಬಾದ್ ನಗರಗಳ ಜನರು ಈ ಸಮೀಕ್ಷೆಯಲ್ಲಿ ಪ್ರತಿಕ್ರಿಯ ನೀಡಿದರು.

ಶೇ 85ರಷ್ಟು ಜನರು ಈ ಹಗರಣದಲ್ಲಿ ಭಾಗಿಯಾದ ಸಚಿವರುಗಳನ್ನು ಅವರುಗಳ ಹುದ್ದೆಯಿಂದ ತೆಗೆದು ಹಾಕಬೇಕೆಂದರೂ ಇವರಿಗೆಲ್ಲ ಕೇಂದ್ರ ಸರ್ಕಾರ ಈ ವರಗೆ ಕೈಗೊಂಡ ಕ್ರಮಗಳ ಬಗ್ಗೆ ತೀವ್ರ ಅಸಮಾಧಾನವಿದೆ. ಅಲ್ಲದೆ ಕೇಂದ್ರ ಹಣಕಾಸು ಸಚಿವಾಲಯದ ಬಗೆಗೂ ಈ ಜನರ ಅಸಮಾಧಾನ ತೀವ್ರವಾಗಿದೆ.

ಹಗರಣದಲ್ಲಿ ಭಾಗಿಗಳಾದ ಎಲ್ಲರನ್ನೂ ರಕ್ಷಿಸಿ ಇದೇ ವಿದೇಶಿಯರಿಗೆ ಭಾರತದಲ್ಲಿ ಉದಾರ ಆರ್ಥಿಕ ನೀತಿ ಇದೆ ಎಂಬುದಕ್ಕೆ ನಿದರ್ಶನ ಎಂದು ತೋರಬಯಸುವ ಕೇಂದ್ರ ಸರ್ಕಾರ ಇವರೆಲ್ಲರನ್ನು ರಕ್ಷಿಸುತ್ತದೆ ಸಂಸತ್ತಿನ ಸದನಗಳಲ್ಲಿ ವಿರೋಧ ಪಕ್ಷಗಳು ಅತೀವ ಒತ್ತಡ ಹೇರಿದಾಗ ಕ್ರಿಯಾ ವರದಿಯನ್ನು ಪರಿಷ್ಕರಿಸುವುದಾಗಿ ಸರ್ಕಾರ ಹೇಳಿತು. ಆದರೆ ಈಗ ಮತ್ತೆ ಕಣ್ಣೊರೆಸುವ ತಂತ್ರವನ್ನು ಅದು ಮಾಡುತ್ತಿದೆ. ಯಾವುದೇ ಮಂತ್ರಿಯನ್ನು ಕೈಬಿಡದೆ ಅಧಿಕಾರಿಗಳ ಮೇಲೆ ಕ್ರಮಕೈಗೊಳ್ಳಲಿದೆ ಕ್ರಿಯಾ ವರದಿಯನ್ನು ಅದು ಮಂಡಿಸಲು ಪ್ರಯತ್ನಿಸುತ್ತಿದೆ ಅದು ಸರ್ಕಾರದ ನಿಷ್ಕ್ರಿಯಾ ವರದಿ ಎಂಬುದರಲ್ಲಿ ಸಂಶಯವೇ ಇಲ್ಲ.

ಆದರೆ ಜನತೆ ಇಂತಹ ಸ್ಪಷ್ಟ ಧೋರಣೆ ನಿಲುವು ಹೊಂದಿರುವುದು ದಕ್ಷಿಣದ ರಾಜ್ಯಗಳಲ್ಲಿ ಮತದಾರರು ನೀಡಿದ ತೀರ್ಪಿನಲ್ಲೂ ವ್ಯಕ್ತವಾಗಿದೆ. ಆದರೆ ಹಗರಣದ ಹಣದಲ್ಲಿ ನೇರ ಪಾಲು ಪಡೆದಿರಬಹುದಾದ ನರಸಿಂಹ ರಾಯರಸರ್ಕಾರ ನಿಷ್ಕ್ರಿಯ ವರದಿಯಲ್ಲದೆ ಇನ್ನೇನನ್ನು ಮಂಡಿಸೀತು?

## ಹೆದ್ದಾರಿ ದರೋಡೆ ಮುಂದುವರಿಯುವುದು

ದಕ್ಷಿಣದ ಎರಡು ರಾಜ್ಯಗಳಲ್ಲಿ, ಕೇಂದ್ರದ ಕಾಂಗ್ರೆ ಸರ್ಕಾರದ ಆರ್ಥಿಕ ನೀತಿಗಳಿಂದಾಗಿ ರೋಸಿಹೋದ ಜನತೆ ಆ ಪಕ್ಷದ ವಿರುದ್ಧ ಮತ ನೀಡಿದರು. ಆದರೆ ಕೆಳಗೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎಂಬಂತೆ ಪೋಸು ಕೊಡುತ್ತಿರುವ ಕಾಂಗ್ರೆ ತನ್ನ ಸೋಲಿನ ಹಿನ್ನಲೆಯನ್ನು ಒಪ್ಪಿಕೊಳ್ಳುತ್ತಿಲ್ಲ.

ಹಾಗೆ ಇವರ ಧಣಿಗಳಾದ ವಿಶ್ವ ಬ್ಯಾಂಕ್,ಐಎಂಎಫ್ ಗಳು ಈ ಸೋಲು ಉದಾರೀಕರಣದಿಂದಾಗಿ ಬಂದದ್ದಲ್ಲ ಎಂದು ಹೇಳಿರಬಹುದು ಕೇಂದ್ರದ ಕಾರ್ಮಿಕ ಖಾತೆಯ ರಾಜ್ಯ ಮಂತ್ರಿ ಪಿ.ಎ.ಸಾಂಗ್ಮಾ ಉದಾರೀಕರಣದ ಗತಿ ಮತ್ತು ದಿಸೆ ಬದಲಾಗುವುದಿಲ್ಲ ಎಂಬ ಹೇಳಿಕೆ ನೀಡಿದ್ದಾರೆ. ಆದರೆ ನಿಜದಲ್ಲಿ ಕಾಂಗ್ರೆಸ್ ಒಳಗೇ ಈ ವಿಷಯದ ಮೇಲೆ ಬಿರುಗಾಳಿ ಎದ್ದು ಹೋಗಿದೆ. ಬಡಜನತೆಯ ಮೇಲೆ ಎಂದೆಂದೂ ಸವಾರಿ ಮಾಡಬಹುದೆಂಬ ಭ್ರಮೆಯ ಅಮಲು ಇಳಿಯುತೊಡಗಿದೆ ಈಗ. ಆದ್ದರಿಂದಲೇ ಹಲವು ಕಾಂಗ್ರೆಸ್ ಮುಖಂಡರು ಉದಾರೀಕರಣದ ಬಗ್ಗೆ ಇನ್ನೂ ಹೆಚ್ಚು ಯೊಚಿಸಬೇಕು ಯಾಕೆ ಸೋತೆವು ಎಂಬುದರ ಬಗೆಗೂ ಯೋಜಿಸಬೇಕು ಎಂದೆಲ್ಲ ಹೇಳ ತೊಡಗಿದ್ದಾರೆ.

ಕಾಂಗ್ರೆಸ್ ಆಡಳಿತದಲ್ಲಿರುವವರಗೆ ಉದಾರೀಕರಣದ ದಿಕ್ಕನ್ನು ಬದಲಾಯಿಸುವ ಧೈರ್ಯ ಅದಕ್ಕಿರಲಾರದು.

ಆದರೆ ಉಧಾರೀಕರಣದ ಗತಿಯಂತೂ ಹಿಂದೆ ಇದ್ದಂತೆ ಇರಲಾರದು ಆಧೈರ್ಯ ಕಾಂಗ್ರೆಸ್‌ಗೆ ಖಂಡಿತಾ ಇಲ್ಲ.

ಆಗಲೇ ನಡುಗ ತೊಡಗಿರುವ ಕಾಂಗ್ರೆಸ್ ಉದಾರೀಕರಣದ ಗತಿಯನ್ನು ಕಡಿಮೆ ಮಾಡಿದರೂ ಈ ಸರ್ಕಾರದ ನೀತಿಗಳ ವಿರುದ್ಧ ಜನತೆ ಇನ್ನೂ ಹೆಚ್ಚೆಚ್ಚು ಕೆಚ್ಚಿನಿಂದ ಹೋರಾಡ ಬೇಕಾಗಿ ಬರುವುದು ಸುಳ್ಳೇನಲ್ಲ ಅಲ್ಲವೆ?


## ರಫ್ತೆಂಬ ಮಂತ್ರಕ್ಕೆ ಉದುರದ ಮಾವಿನ ಕಾಯಿ

ಉದಾರೀಕರಣದ ಜೊತಗೇ ಕೇಂದ್ರ ಸರ್ಕಾರ 'ರಫ್ತು' 'ರಫ್ತು' ಎಂದು ಮಂತ್ರ ಪಠಣ ಮಾಡತೊಡಗಿದೆ. ಆದರೆ ಈ ರಫ್ತು ಮಾತ್ರ ಬೆಳೆಯುತ್ತಲೇ ಇಲ್ಲ ರಫ್ತು ಬೆಳೆಯಲು ಎಲ್ಲ ತರಹದ ರುಷುವತ್ತುಗಳನ್ನು ನೀಡಲು ಸರ್ಕಾರ ಸಿದ್ಧವಾಗಿದೆ. ಆದರೆ ಯಾವುದೇ ಕ್ಷೇತ್ರದಲ್ಲೂ ಇದು ನಿರೀಕ್ಷಿತ ಪ್ರಮಾಣದಲ್ಲಿ ಬೆಳಯುತ್ತಿಲ್ಲ.

ದೇಶದೊಳಗೆ ನಾವು ತಂತ್ರಜ್ಞಾನ ಬೆಳಸಿ ಸಾಧನೆ ಮಾಡಿ ಗಟ್ಟಿಯಾದ ಆರ್ಥ ವ್ಯವಸ್ಥೆ ಬೆಳಸಿದ್ದರೆ ಆಗ ನಮ್ಮ ಸರಕುಗಳಿಗೆ ಅಂತರಾಷ್ಟ್ರಿಯ ಮಾರುಕಟ್ಟೆಯಲ್ಲಿ ಬೇಡಿಕೆ ಬಂದೇ ಬರುತ್ತದೆ. ಆದರೆ ಇದಾವುದೂ ಇಲ್ಲದಿರುವಾಗ ನಮ್ಮ ಸರಕುಗಳಿಗೆ ಬೇಡಿಕೆ ಬರಬೇಕೆಂದರೆ ಅದು ಸುಲಭವಲ್ಲ.

ಉದಾರೀಕರಣದಿಂದಾಗಿಯೇ ರಫ್ತು ಕುಂಠಿತವಾಗಿರುವ ಸಾಧ್ಯತೆಗಳಿವೆ, ರೂಪಾಯಿಯ ಅಪಮೌಲ್ಯೀಕರಣದಂತಹ ಕ್ರಮದಿಂದ ನಮ್ಮ ರಫ್ತಿನ ಪ್ರಮಾಣ ತೀವ್ರವಾಗಿ ಏರಬೇಕಾಗಿತ್ತು.ಆದರೆ ಸರ್ಕಾರ ಇಂದು ಹಲವು ಸರ್ಕಸ್ಸುಗಳನ್ನು ಮಾಡುತ್ತಲೇ ಇದೆ ಆದರೆ ರಫ್ತು ಮಾತ್ರ ನಿರೀಕ್ಷಿತ ಪ್ರಮಾಣದಲ್ಲಿ ಏರುತ್ತಿಲ್ಲ

ಇದರ ಪರಿಣಾಮ ಏನಾಗುತ್ತದೆ. ನಮ್ಮ ವಿದೇಶೀ ಸಾಲಗಳನ್ನು ತೀರಿಸಲು



-ಜಿ.ಎಸ್. ಮಣಿ

ರಫ್ತಿನಿಂದ ಬರುವ ವಿದೇಶೀ ವಿನಿಮಯ ಬಹಳ ಅನುಕೂಲಕರವಾಗಿ ಇದ್ದರೆ ಅದರಿಂದ ಬರಬಹುದಾದ ಆದಾಯವೂ ಖೋತಾ ಆಗಿ ಪರಿಸ್ಥಿತಿ ವಿಷಮಿಸುತ್ತದೆ. ಐಎಂಎಫ್ ವಿಶ್ವಬ್ಯಾಂಕ್ ಗಳಿಂದ ಯಥೇಚ್ಛವಾಗಿ ಸಾಲ ಪಡೆದಿರುವ ಸರ್ಕಾರ ಅವರ ಷರತ್ತುಗಳಿಗೆಲ್ಲ ಒಪ್ಪಿ ದೇಶದ ಹಿತವನ್ನೇ ಒತ್ತೆ ಇಟ್ಟಿದೆ. ಈಗ ಈ ಸಾಲವನ್ನು ಮರುಪಾವತಿಸಲಾಗದಿದ್ದಲ್ಲಿ ಮತ್ತೆ ಸಾಲಕ್ಕೆ ಮೊರೆ ಹೋಗ ಬೇಕಾಗುತ್ತದೆ. ಮತ್ತೆ ಷರತ್ತುಗಳಿಗೆ ತಲೆಬಾಗಬೇಕಾಗುತ್ತದೆ. ಇದು ವಿಷವರ್ತುಲವಾಗಿ ಬೆಳಿಯುತ್ತ ಹೋಗುತ್ತದೆ.

## ಬಡವರ ಜೀವ ಉಳಿಸಿದರೆ ಗಲ್ಲು ಶಿಕ್ಷೆ ನೀಡುವ ಕಾನೂನು ಬೇಕು!

ಹುಬ್ಬೇರಿಸಬೇಡಿ ಇಂತಹದ್ದೇ ಮಾತನ್ನು ದೇಶದ ಸಭ್ಯ ಮಹಾಶಯರೊಬ್ಬರು ಆಡಿದ್ದಾರೆ. ಇವರು ಬರೀ ಸಭ್ಯರಷ್ಟೇ ಅಲ್ಲ ಜವಾಬ್ದಾರಾಸ್ಥರೂ ಹೌದು ಯಾರು ಎಂದಿರಾ? ಡಾ.ಮನಮೋಹನ್ ಸಿಂಗ್ ಹೌದು ಕೇಂದ್ರ ಅರ್ಥ ಸಚಿವರೇ.

ಇದು ದೊಡ್ಡ ಒಗಟೇನೂ ಅಲ್ಲ ಆ ಮನಮೋಹನ ಸಿಂಗರು ವಾಸ್ತವವಾಗಿ ಹೇಳಿದ್ದು ಇದು ಕೆಲವು ಪಕ್ಷಗಳು ದೇಶದ ಅರ್ಥ ನೀತಿಗೆ ವಿರುದ್ಧವಾದ ಭರವಸೆಗಳನ್ನು ನೀಡಿ ಅವುಗಳ ಲಾಭ ಪಡೆಯಲು ಪ್ರಯತ್ನಿಸುತ್ತಾರೆ ಆದ್ದರಿಂದ ಇಂತಹ ಭರವಸೆ ನೀಡಲು ಅವಕಾಶವಿರದಂತೆ ಕಾನೂನು ಮಾಡಬೇಕಾಗಬಹುದು.

ಇಲ್ಲಿ ಸ್ಪಷ್ಟವಾಗಿರುವುದು ಈ ಮಾತುಗಳನ್ನೂ ಅವರು ಆಂಧ್ರ ಪ್ರದೇಶದಲ್ಲಿ ತೆಲುಗು ದೇಶಂ ಪಕ್ಷ ಎರಡು ರೂಪಾಯಿಗೆ ಒಂದು ಕಿ.ಲೋ. ಅಕ್ಕಿ ನೀಡುವ ಭರವಸೆ ನೀಡಿದ್ದನ್ನು ಗಮನದಲ್ಲಿಟ್ಟುಕೊಂಡು ಆಡಿದ್ದಾರೆ. ಆ ಭರವಸೆ ಜನವಿರೋಧಿಯಾಗಿದ್ದರೆ ಖಂಡಿತವಾಗಿಯೂ ಮನಮೋಹನಸಿಂಗರಿಗೆ ಸಹಾನುಭೂತಿ ತೋರಬಹುದಾಗಿತ್ತು.

ಆದರೆ ಈ ಕ್ರಮ ಅತ್ಯಂತ ಜನಪರವಾದದ್ದು ಉದಾರೀಕರಣದ ಬೆಲೆಗಳು ವಿಪರೀತ ಏರಿ ಬಡಜನತೆ ಒಪ್ಪೊತ್ತಿನ ಊಟಕ್ಕೂ ಮೇಲೆ ಕೆಳಗೆ ನೋಡಬೇಕಾದ ಸ್ಥಿತಿ ಇರುವಾಗ ಇಂತಹ ಭರವಸೆ ನೀಡಬೇಕಾದದ್ದು ಭರವಸೆಯನ್ನು ಕಾರ್ಯರೂಪಕ್ಕೆ ತರಬೇಕಾದದ್ದು ನ್ಯಾಯ ಮತ್ತು ಸಮಂಜಸವಾದದ್ದು.

ಆದರೆ ಇದಕ್ಕೆ ವಿರುದ್ಧವಾದದ್ದನ್ನು ಮಾಡುವ ಕಾನೂನು ಮಾಡಹೊರಟರೆ ಉದಾರೀಕರಣದ ನಿಜವಾದ ಬೆಲೆಗಟ್ಟು ಈಗಲಾದರೂ ಬಹಳ ಸ್ಪಷ್ಟವಾಗಿ ಅರ್ಥವಾಗಿರಬೇಕಲ್ಲವೆ?

ಲೋಕಸಂಚಾರ



ಶರತ್‌ಚಂದ್ರ

# ಚೆಚೆನ್‌ಗೆ ರಶ್ಯನ್ ಪಡೆಗಳು-ದೀರ್ಘ ಜನಾಂಗೀಯ ಕಲಹಕ್ಕೆ ಆಹ್ವಾನ?

ರಶ್ಯನ್ ಅಧ್ಯಕ್ಷ ಯೆಲ್ಸಿನ್, ಚೆಚೆನ್ ಸ್ವಾಯತ್ತ ಪ್ರದೇಶಕ್ಕೆ ಸಶಸ್ತ್ರ ಪಡೆಗಳನ್ನು ಕಳಿಸುವ ಮೂಲಕ, ಚೆಚೆನ್ ಬಿಕ್ಕಟ್ಟಿನ ಮಿಲಿಟರಿ ಪರಿಹಾರಕ್ಕೆ ಹೊರಟಿದ್ದಾರೆ. ಇದು ಚೆಚೆನ್‌ನಲ್ಲಿ ದೀರ್ಘ ಜನಾಂಗೀಯ ಕಲಹಕ್ಕೆ ಎಡೆಕೊಡಬಹುದು, ಅಂತಿಮವಾಗಿ ಇಡೀ ರಶ್ಯ ಆಂತರಿಕ ಯುದ್ಧದಲ್ಲಿ ಸಿಕ್ಕಿಹಾಕಿಕೊಳ್ಳಬಹುದು ಎಂದು ಅವರ ಸಲಹಾಕಾರರು ಹೇಳಿದ್ದರು, ಅಧ್ಯಕ್ಷ ಯೆಲ್ಸಿನ್ ಈ ದುಸ್ಸಾಹಸಕ್ಕೆ ಕೈಹಾಕಿದ್ದಾರೆ. ರಶ್ಯದ ಇತರ ಸಮಸ್ಯೆಗಳಿಂದ ಜನರ ಗಮನ ಬೇರೆಡೆಗೆ ಹರಿಸಿ, ಅದನ್ನೇ ನೆವಮಾಡಿಕೊಂಡು ರಶ್ಯದಲ್ಲಿ ಮಿಲಿಟರಿ ಸರ್ವಾಧಿಕಾರ ಸ್ಥಾಪಿಸುವುದು ಅವರ ದುರುದ್ದೇಶವಾಗಿರಬಹುದು ಎಂದು ಶಂಕಿಸಲಾಗುತ್ತಿದೆ.

1991ರಲ್ಲಿ ಚೆಚೆನ್ ರಶ್ಯದಿಂದ ಸ್ವಾತಂತ್ರ್ಯ ಘೋಷಿಸಿದಂದಾಗಿನಿಂದ ಚೆಚೆನ್ ತೀವ್ರ ರಾಜಕೀಯ ಬಿಕ್ಕಟ್ಟು ಎದುರಿಸುತ್ತಿದೆ. ಚೆಚೆನ್ ಗಣರಾಜ್ಯದ ಅಧ್ಯಕ್ಷ ಜನರಲ್ ದುರಾಯೆವ್‌ರ ನಾಯಕತ್ವದಲ್ಲಿ ಕಳೆದ ಕೆಲವು ತಿಂಗಳುಗಳಿಂದ ರಶ್ಯನ್ ಕೇಂದ್ರ ಸರಕಾರದ ಜತೆ ತಿಕ್ಕಾಟಕ್ಕೆ ಇಳಿದಿತ್ತು. ಅಧ್ಯಕ್ಷ ಯೆಲ್ಸಿನ್‌ರ ಸರ್ಕಾರ ಸಹ ಸಮಸ್ಯೆಗೆ ಮಾತುಕತೆಗಳ ಮೂಲಕ ರಾಜಕೀಯ ಪರಿಹಾರ ಹುಡುಕುವ ಬದಲು, ಚೆಚೆನ್‌ಗೆ 'ಬುದ್ಧಿಕಲಿಸಲು' ಹೊರಟಿತ್ತು. ಇದರಿಂದ ಸಮಸ್ಯೆ ಉಲ್ಬಣಗೊಂಡಿತ್ತು. ಮಾಜಿ ಸೋವಿಯೆತ್ ಒಕ್ಕೂಟದ ಜನಾಂಗೀಯ ನೀತಿಯ ಭಾಗವಾಗಿ ರಶ್ಯನ್ ಗಣರಾಜ್ಯದಲ್ಲಿದ್ದ ಚೆಚೆನ್ ಅವರ ವಿಶಿಷ್ಟ ಪರಿಸ್ಥಿತಿಯಿಂದಾಗಿ ಸ್ವಾಯತ್ತ ಪ್ರದೇಶಗಳಲ್ಲಿ ಒಂದಾಗಿತ್ತು. ಮಾಸ್ಕೋದಿಂದ ಸುಮಾರು ಸಾವಿರ ಕಿ.ಮೀ. ನಷ್ಟು ದಕ್ಷಿಣಕ್ಕಿರುವ ಚೆಚೆನ್‌ನ ಶೇಕಡಾ 75ರಷ್ಟು ಮುಸ್ಲಿಂ ಮುಖ್ಯವಾಗಿ ರಶ್ಯನರಿಗೆ ಇಷ್ಟವಾಗಲಿಲ್ಲ, ಸ್ಥಳೀಯ ಸರ್ಕಾರಕ್ಕೆ ಚೆಚೆನ್ ಕೆಲವರಿಗೂ ಚೆಚೆನ್ ಜನಾಂಗದವರು. ಉಳಿದವರು ರಶ್ಯನ್ ಮೂಲದವರು. 1991ರಲ್ಲಿ ಚೆಚೆನ್ ಸ್ವತಂತ್ರ ಘೋಷಿಸಿದ್ದು ಕೇಂದ್ರ ಸರ್ಕಾರಕ್ಕೆ ಇಷ್ಟವಾಗಲಿಲ್ಲ, ವಿರೋಧವಾದ ಚಳುವಳಿ ಒಂದು ಹುಟ್ಟಿಕೊಂಡಿತು. ಈ ವಿರೋಧಿ ಗುಂಪಿಗೆ ರಶ್ಯನ್ ಸರ್ಕಾರ ಗುಪ್ತವಾಗಿ ಸಹಾಯಮಾಡುತ್ತಿತ್ತು.

ಚೆಚೆನ್‌ನಲ್ಲಿ ಬಹಳಷ್ಟು ತೈಲ ಸಂಸ್ಕರಣ ಕೇಂದ್ರಗಳಿದ್ದು, ಅದು ಮುಸ್ಲಿಂ ಬಹುಸಂಖ್ಯಾತ ಪ್ರದೇಶವಾದುದರಿಂದ, ಮುಸ್ಲಿಂ ದೇಶಗಳಿಗೆ ಅದರ ಮೇಲೆ ಕಣ್ಣು. ಮುಸ್ಲಿಂ ಮೂಲಭೂತವಾದಿಗಳು ಚೆಚೆನ್ ಪ್ರತ್ಯೇಕತಾವಾದಕ್ಕೆ ಕುಮ್ಮಕ್ಕು ಕೊಡುತ್ತಿದ್ದಾರೆ. ಅಫ್ ಘಾನಿಸ್ತಾನ ಮತ್ತು ಇತರ ದೇಶಗಳಿಂದ ಬಂದಿರುವ ಮುಸ್ಲಿಂ ಮೂಲಭೂತವಾದಿಗಳು ಚೆಚೆನ್ ಪ್ರತ್ಯೇಕತಾವಾದವನ್ನು 'ಜೆಹಾದ್' (ಧರ್ಮ ಯುದ್ಧ)ಗಳಾಗಿ ಬದಲಾಯಿಸಿ ಬಿಟ್ಟಿದ್ದಾರೆ. ಈಗ ಚೆಚೆನ್‌ನ ಸಶಸ್ತ್ರ ಅರೆಸೈನಿಕ ಬಲವನ್ನು ನಿಯಂತ್ರಿಸುತ್ತಿರುವುದು ತಾವಲ್ಲ, ಮುಜಾಹಿದಿನ್ (ಮೂಲಭೂತವಾದಿಗಳು) ಎಂದು ಚೆಚೆನ್‌ನ ಅಧ್ಯಕ್ಷರೇ ಒಪ್ಪಿಕೊಳ್ಳುತ್ತಾರೆ.

ರಶ್ಯಾನ್ ಸೈನ್ಯ ಚೆಚೆನ್‌ರ ರಾಜಧಾನಿ ಗ್ರೋಝಿ ಬಳಿ ಇದೆ. ಚೆಚೆನ್ ಪ್ರಾಂತ್ಯದ ಮೇಲೆ ರಶ್ಯನ್ ಯುದ್ಧ ವಿಮಾನಗಳು ಹಾರಿ ಎಚ್ಚರಿಕೆ ನೀಡಿದವು. ಗ್ರೋಝಿಯ ಹೊರಭಾಗಗಳಲ್ಲಿ ಬಾಂಬ್ ದಾಳಿಯೂ ನಡೆಯಿತು. ರಶ್ಯನ್ ಸೇನಾ ತುಕಡಿಗಳಿಗೂ ಹಾಗೂ ರಶ್ಯನ್ ಅಧ್ಯಕ್ಷ ಯೆಲ್ಸಿನ್, ಚೆಚೆನ್ ಅರೆಸೈನ್ಯ ಪಡೆಗಳು ಡಿಸೆಂಬರ್ ೧೫ರೊಳಗೆ ಶಸ್ತ್ರತ್ಯಾಗಮಾಡಿ ಶರಣಾಗಬೇಕು ಇಲ್ಲದಿದ್ದರೆ ಚೆಚೆನ್ ಮೇಲೆ ಪೂರ್ಣ ಪ್ರಮಾಣದ ಆಕ್ರಮಣ ಮಾಡಿ, ಚೆಚೆನ್ ಪಡೆಗಳನ್ನು ನಿಶ್ಯಸ್ತ್ರೀಕರಿಸುವುದಾಗಿ ಬೆದರಿಸಿದೆ. ಆ ಗಡುವು ಮುಗಿದಿದ್ದು, ಕೆಲ ಶಾಂತಿ ಮಾತುಕತೆಗಳು ನಡೆಯುತ್ತಿವೆ.

ಮಿಲಿಟರಿ ಘರ್ಷಣೆ ಮುಂದುವರೆದರೆ ಭಾರೀ ರಕ್ತಪಾತ ದೀರ್ಘ ಕಾಲದ ಜನಾಂಗೀಯ ಘರ್ಷಣೆ ಮುಂದುವರೆಯುವುದು. ಆದ್ದರಿಂದ ಪೂರ್ಣಪ್ರಮಾಣದ ಯುದ್ಧವಾಗದಂತೆ ಅಧ್ಯಕ್ಷ ಯೆಲ್ಸಿನ್ ದುಡುಕದಂತೆ, ರಶ್ಯನ್ ಕಮ್ಯುನಿಸ್ಟರು ಹಾಗೂ ಇತರ ಪ್ರಗತಿ ಪಂಥೀಯರು ಚೆಚೆನ್ ರಿಗೆ ಬುದ್ಧಿ ಕಲಿಸುವಲ್ಲಿ ಅಧ್ಯಕ್ಷ ಯೆಲ್ಸಿನ್ ರ ಜತೆಗೆ ಸೇರಿದ್ದಾರೆ.

## ಬ್ರೆಜಿಲ್‌ಗೆ ಸಾಮ್ರಾಜ್ಯಶಾಹಿ ಪರ ಅಧ್ಯಕ್ಷ

ಬ್ರೆಜಿಲ್ ಇತ್ತೀಚೆಗೆ ಪ್ರಮುಖ ರಾಜಕೀಯ ಸಂಘರ್ಷದ ಸ್ಥಳವಾಗಿತ್ತು. 8 ಕೋಟಿ ಮತದಾರರು ಭಾಗವಹಿಸಿದ ಸಾರ್ವತ್ರಿಕ ಚುನಾವಣೆಗಳು ನಡೆದವು. ಅಧ್ಯಕ್ಷ, ಪ್ರಾಂತಿಯ ಗವರ್ನರ್‌ಗಳು, ಸೆನೆಟರ್‌ಗಳು, ಹಾಗೂ ಕೇಂದ್ರ-ರಾಜ್ಯಗಳ ಪಾರ್ಲಿಮೆಂಟ್‌ಗಳ ಸದಸ್ಯರನ್ನು ಆಯ್ಕೆ ಮಾಡಲು ಚುನಾವಣೆಗಳು ನಡೆದವು. ಅಧ್ಯಕ್ಷೀಯ ಚುನಾವಣೆಯಲ್ಲಿ ಬಲಪಂಥೀಯ ಸಾಮ್ರಾಜ್ಯಶಾಹಿ-ಪರ ಶಕ್ತಿಗಳು ಬೆಂಬಲಿಸಿದ ಫೆರ್ನಾಂಡೋ ಹೆನ್ರಿಕೆ ಕಾರ್ಡೋಸೊ ಅಧ್ಯಕ್ಷರಾಗಿ ಚುನಾಯಿತರಾದರು. ಈ ಜಯ, ಬ್ರೆಜಿಲ್‌ನ ಆಂತರಿಕ ಹಾಗೂ ಬಾಹ್ಯ ಪ್ರತಿಗಾಮಿ ಶಕ್ತಿಗಳು ಸಂಘಟಿಸಿದ ಸೂಕ್ಷ್ಮ ರಾಜಕೀಯ ಆರ್ಥಿಕ, ಸೈದ್ಧಾಂತಿಕ ಹಾಗೂ ಆಡಳಿತಾತ್ಮಕ ಕ್ರಮಗಳ ಫಲ. ಪಕ್ಕಾ ಬಲಪಂಥೀಯ ಅಭ್ಯರ್ಥಿ ನಿಲ್ಲಿಸುವುದು ಅವರಿಗೆ ಅಸಾಧ್ಯವಾಗಿತ್ತು. ಆದ್ದರಿಂದ ಬಲಪಂಥದೊಂದಿಗೆ ಪೂರ್ಣ ಗುರುತಿಸಿಕೊಳ್ಳದಿದ್ದ, ಮತ್ತು ಪ್ರಾಮಾಣಿಕತೆಗೆ ಹೆಸರಾದ ಅಭ್ಯರ್ಥಿ ಕಾರ್ಡೋಸಾರನ್ನು ಆಯ್ಕೆ ಮಾಡಲಾಯಿತು. ಆ ಅಭ್ಯರ್ಥಿಗೆ ಬಲಪಂಥೀಯ ಪ್ರತಿಗಾಮಿ ಪಕ್ಷ ಪಿ.ಎಫ್.ಎಲ್. ಅಲ್ಲದೆ ಮಧ್ಯಗಾಮೀಪಕ್ಷ ಪಿ.ಎಸ್.ಡಿ.ಬಿ.ಯ ಬೆಂಬಲ ಪಡೆದುಕೊಳ್ಳಲಾಯಿತು. ಚುನಾವಣಾ ಪ್ರಚಾರ ನಡೆಯುತ್ತಿದ್ದಂತೆ, ನಡುವೆ ಹಣದುಬ್ಬರ-ನಿಯಂತ್ರಿಸುವ ವಿಶೇಷ ಆರ್ಥಿಕ ಯೋಜನೆಯನ್ನು ಘೋಷಿಸಲಾಯಿತು. ದೂರಗಾಮಿಯಾಗಿ ಯಾವುದೇ ರೀತಿಯಲ್ಲಿ ಅದು ಹಣದುಬ್ಬರವನ್ನು ನಿವಾರಿಸದಿದ್ದರೂ ಉತ್ತರದ ಬೆಲೆ ಏರಿಕೆ ಹಾಗೂ ಹಣಕಾಸಿನ ಭದ್ರತೆಯ ಸಮಸ್ಯೆಗೆ ಒಂದು ವಿಶಿಷ್ಟ ಪರಿಹಾರ ಕಂಡು ಹಿಡಿಯಲಾಗಿದೆ ಎಂಬ ಭ್ರಮೆಯನ್ನು ಪ್ರಸಾರ ಮಾಧ್ಯಮಗಳ ಸಹಾಯದಿಂದ ಹರಡಲಾಯಿತು.

ಇದಕ್ಕೆ ಪ್ರತಿಯಾಗಿ ಮಧ್ಯಗಾಮಿ ಹಾಗೂ ಎಡಪಂಥೀಯರು ಮೂರು ಅಭ್ಯರ್ಥಿಗಳ ಮಧ್ಯೆ ಹಂಚಿಹೋಗಿದ್ದರು. ಆದರೆ ಕೊನೆಯ ಹೊತ್ತಿಗೆ ಎಲ್ಲ ಮಧ್ಯಗಾಮೀ ಹಾಗೂ ಎಡಪಂಥೀಯರು ಲುವಾ ಎಂಬ ಅಭ್ಯರ್ಥಿಯ ಬೆಂಬಲಾರ್ಥ ಒಗ್ಗಟ್ಟಾಗಿ ಹೋರಾಡಿದರು. ಲುವಾರವರಿಗೆ ಬೆಂಬಲವಾಗಿ ಬ್ರೆಜಿಲ್ ಕಮ್ಯುನಿಸ್ಟ್ ಪಕ್ಷ ಸೇರಿದಂತೆ ಐದು ಪಕ್ಷಗಳ 'ಬ್ರೆಜಿಲ್ ಜನತಾ ರಂಗ' ಸ್ಥಾಪಿಸಲಾಯಿತು. ಆದರೆ ಈ ರಂಗ ಕಮ್ಯುನಿಸ್ಟ್ ಪಕ್ಷ ಸೂಚಿಸಿದಂತೆ, ವಿಶಾಲ ಜನರ ರಂಗವಾಗಿ ಕಾರ್ಯಕ್ರಮಾತ್ಮಕವಾಗಿ ರಾಜಕೀಯವಾಗಿಯೂ ಬೆಳೆಯುವ ಪ್ರಯತ್ನ ಮಾಡಲಿಲ್ಲ, ಅಲ್ಲದೆ ಕೆಲವು ಪ್ರಮುಖ ವಿಷಯಗಳ ಬಗ್ಗೆ ಸ್ಪಷ್ಟ ಪ್ರಜಾಸತ್ತಾತ್ಮಕ ನೀತಿಯನ್ನು ಜನರ ಮುಂದಿಡುವ ಮೂಲಕ 'ಬದಲಿ' ಕೊಡುವ ಪ್ರಯತ್ನ ಮಾಡಲಿಲ್ಲ. ಬ್ರೆಜಿಲ್‌ನ ವಿದೇಶಿ ಸಾಲ, ಹೈತಿಯ ಮೇಲೆ ಅಮೇರಿಕನ್ ಆಕ್ರಮಣ, ಸಂವಿಧಾನದಲ್ಲಿ ಬದಲಾವಣೆ, ಖಾಸಗೀಕರಣ ಇವುಗಳ ಬಗ್ಗೆ ಕಾರ್ಡೋಸೊರವರ ರಂಗಕ್ಕಿಂತ ಸ್ಪಷ್ಟವಾಗಿ ಬೇರೆಯಾದ ನೀತಿ ಜನರ ಮುಂದೆ ಬರಲಿಲ್ಲ.

ಆದರೂ ಲುವಾರವರ ಅಧ್ಯಕ್ಷೀಯ ಚುನಾವಣಾ ಪ್ರಚಾರ ಬ್ರೆಜಿಲ್‌ನ ಜನಪರ ಪ್ರಜಾಸತ್ತಾತ್ಮಕ ಶಕ್ತಿಗಳ ಬಲಪ್ರದರ್ಶನವಾಗಿತ್ತು. ಅಧ್ಯಕ್ಷೀಯ ಚುನಾವಣೆಯಲ್ಲಿ ಸೋತರೂ, ಇತರ ಚುನಾವಣೆಗಳಲ್ಲಿ ಈ ಶಕ್ತಿಗಳಿಗೆ ಸಿಕ್ಕಿದ ಆಂಶಿಕ ವಿಜಯ, ದೇಶದ ರಾಜಕೀಯ ಬಲಾಬಲಗಳಲ್ಲಿ ಸಾಕಷ್ಟು ಬದಲಾವಣೆ ತಂದಿದೆ.

ಪಿಟಿ ಎಂಬ ಎಡಪಕ್ಷದ ಬಲ ಪಾರ್ಲಿಮೆಂಟಿನಲ್ಲಿ 36 ರಿಂದ 45ಕ್ಕೆ ಏರಿದೆ. ಬ್ರೆಜಿಲ್ ಕಮ್ಯುನಿಸ್ಟ್ ಪಕ್ಷದ ಸದಸ್ಯರ ಸಂಖ್ಯೆ ಇಮ್ಮಡಿಯಾಗಿ 10ಕ್ಕೇರಿದೆ. ಎರಡು ರಾಜ್ಯಗಳಲ್ಲಿ ಎಡಪಂಥೀಯರು ಅಭ್ಯರ್ಥಿಗಳು ಎರಡನೇ ಅತಿ ಹೆಚ್ಚು ಬೆಂಬಲದ ಅಭ್ಯರ್ಥಿಯಾಗಿದ್ದರು.

## ನಮೀಬಿಯಾ ಚುನಾವಣೆಗಳಲ್ಲಿ ಸ್ವಾಪೋಗೆ ಮೂರನೇ ಎರಡು ಬಹುಮತ

ಸ್ವತಂತ್ರ ನಮೀಬಿಯಾದಲ್ಲಿ ನಡೆದ ಎರಡನೇ ಚುನಾವಣೆಗಳಲ್ಲಿ ಈಗ ಆಳುತ್ತಿರುವ ಸ್ವಾಪೋ (SWAPO) ಭಾರಿ ವಿಜಯ ಸಾಧಿಸಿದೆ. ಸ್ವಾಪೋಗೆ ಮೂರನೇ ಎರಡಕ್ಕಿಂತ ಹೆಚ್ಚು ಬಹುಮತ ಸಿಕ್ಕಿದ್ದು, ಸಂವೈಧಾನಿಕ ಬದಲಾವಣೆ ತರುವ ಅಧಿಕಾರ ಕೊಟ್ಟಿದೆ. ಸ್ವಾಪೋ ಶೇಕಡಾ 73 ರಷ್ಟು ಮತಗಳಿಸಿದೆ. ಜನಪ್ರಿಯ ಅಧ್ಯಕ್ಷ ಸ್ಯಾಮ್‌ ನುಜುಮೊ ಎರಡನೇ ಬಾರಿ ಭಾರೀ ಬಹುಮತದಿಂದ ಪುನರಾಯಕ್ಕೆಯಾಗಿದ್ದಾರೆ. ಅವರಿಗೆ ಶೇಕಡಾ 76.3 ಮತಗಳು ದೊರಕಿವೆ. ಎರಡನೇ ಸ್ಥಾನದಲ್ಲಿ ಡಿ.ಟಿ.ಎ. ಎಂಬ ಪಕ್ಷ ಶೇಕಡಾ 23 ಮತಗಳಿಸಿದೆ ಯು.ಡಿ.ಎಫ್. ಎಂಬ ಇನ್ನೊಂದು ವಿರೋಧ ಪಕ್ಷ ಶೇಕಡಾ .4 ಮತ ಗಳಿಸಿದೆ.

## ಜರ್ಮನ್ ಪದವೀಧರ ನಿರುದ್ಯೋಗಿಗಳ ಭಾರಿ ಏರಿಕೆ

ಪಶ್ಚಿಮ ಜರ್ಮನಿಯಲ್ಲಿ ಪದವೀಧರ ನಿರುದ್ಯೋಗಿಗಳ ಸಂಖ್ಯೆ ಶೇಕಡಾ 25 ರಷ್ಟು ಏರಿದೆ. ಇಂಜಿನೀಯರಿಂಗ್ ಪದವೀಧರರಲ್ಲಿ ನಿರುದ್ಯೋಗ ಶೇಕಡಾ 50 ರಷ್ಟು ಏರಿದೆ. ಸರ್ಕಾರ ಹಾಗೂ ಕೈಗಾರಿಕೆಗಳಲ್ಲಿ ಭಾರಿ ಉದ್ಯೋಗ ಕಡಿತ ಇದಕ್ಕೆ ಕಾರಣ ಎನ್ನಲಾಗುತ್ತಿದೆ. ಈಗ ಪಶ್ಚಿಮ ಜರ್ಮನಿಯಲ್ಲಿ 17 ಪದವೀಧರರು ಒಂದು ಉದ್ಯೋಗಕ್ಕೆ ಪೈಪೋಟಿ ನಡೆಸುವ ಪರಿಸ್ಥಿತಿ ಉಂಟಾಗಿದೆ.

ಪೂರ್ವ ಜರ್ಮನಿಯಲ್ಲಿ ನಿರುದ್ಯೋಗ ಏರಿಕೆ ಶೇಕಡಾ 7.5 ಆಗಿದ್ದರೂ, ಸರಾಸರಿ 30 ಪದವೀಧರರು ಒಂದು ಉದ್ಯೋಗಕ್ಕೆ ಪೈಪೋಟಿ ನಡೆಸುವ ಪರಿಸ್ಥಿತಿ ಉಂಟಾಗಿದೆ.

# ಬಿಹಾರ: ಅತ್ಯಾಚಾರಿ ಶಾಸಕನ ಸೆರೆ

ಹರಿಜನ ಹುಡುಗಿಯೊಬ್ಬಳ ಮೇಲೆ ಅತ್ಯಾಚಾರ ನಡೆಸಿದ್ದ ಬಿಹಾರದ ಜನತಾದಳ ಶಾಸಕ ಯೋಗೇಂದ್ರನಾರಾಯಣ ಸರ್ದಾರ್ ನನ್ನು ಡಿಸೆಂಬರ್ 17 ರಂದು ಬಂಧಿಸಲಾಗಿದೆ. ನವಂಬರ್ 16 ರಂದು ಹೇಮಂತ್ ಗಂಜ್ ಗ್ರಾಮದಲ್ಲಿ ಬಲಾತ್ಕಾರ ಮಾಡಲಾಗಿತ್ತು. ಅತ್ಯಾಚಾರಕ್ಕೆ ಒಳಗಾದ ಹುಡುಗಿ ದಿಟ್ಟತನದಿಂದ ವರ್ತಿಸಿ ಶಾಸಕನ ಮರ್ಮಾಂಗವನ್ನು ಘಾಸಿಗೊಳಿಸಿದ್ದಳು.

ಅಂದಿನಿಂದ ಶಾಸಕ ಸರ್ದಾರ್ ನಾಪತ್ತೆಯಾಗಿದ್ದ. ಸರಿ ಸುಮಾರು ಒಂದು ತಿಂಗಳ ನಂತರ ಆತ ವಿಶೇಷ ಪೋಲಿಸ್ ಪಡೆಯ ಬಲೆಗೆ ಸಿಕ್ಕಿಬಿದ್ದ.

ಸರ್ದಾರ್‌ನನ್ನು ಜನತಾದಳದ ಪ್ರಾಥಮಿಕ ಸದಸ್ಯತ್ವದಿಂದ ಅಮಾನತು ಮಾಡಲಾಗಿದೆ. ಆತನ ಶಾಸಕ ಸ್ಥಾನವನ್ನು ತೆಗೆದು ಹಾಕುವ ಸಂಬಂಧದಲ್ಲಿ ಬಿಹಾರ ವಿಧಾನಸಭೆಯ ಅಧಿವೇಶನದಲ್ಲಿ ಕ್ರಮ ಕೈ ಗೊಳ್ಳುವ ಸಂಭವವಿದೆ.

### ಮಹಿಳಾ ಸಂಘಟನೆಯ ಹೋರಾಟ

ಶಾಲಕ ಯೋಗೇಂದ್ರ ನಾರಾಯಣ ದಾಸ್ ಹಾಗೂ ಆತನ ಸಮಾಜ ವಿರೋಧಿ-ಕ್ರಿಮಿನಲ್ ಸಹವರ್ತಿಗಳನ್ನು ತಕ್ಷಣ ಬಂಧಿಸುವಂತೆ ಒತ್ತಾಯಿಸಿ ನವಂಬರ್ 25 ರಂದು ಪಟ್ನಾದಲ್ಲಿ ಮಹಿಳೆಯರ ಬೃಹತ್ ರ್‍ಯಾಲಿ ನಡೆಯಿತು. ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ (AIDWA) ವ್ಯವಸ್ಥೆಗೊಳಿಸಿದ್ದ ರ್‍ಯಾಲಿಗೆ 4000 ಕ್ಕೂ ಅಧಿಕ ಮಹಿಳೆಯರು ಬಂದು ಪ್ರತಿಭಟನೆಯ ಕೂಗನ್ನು ಎಬ್ಬಿಸಿದರು. ಶಾಸಕನ ಅಸೆಂಬ್ಲಿ ಸದಸ್ಯತ್ವವನ್ನು ರದ್ದುಪಡಿಸುವಂತೆಯೂ ಮಹಿಳೆಯರು ಒತ್ತಾಯಿಸಿದರು.

ಎಐಡಿಬ್ಲ್ಯುಎ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಬೃಂದಾಕಾರಟ್, ಕಾರ್ಯದರ್ಶಿ ಶ್ಯಾಮಲ ಗುಪ್ತಾ ಮತ್ತು ಸಂಸತ್ ಸದಸ್ಯೆ ಡಾ. ಚಂದ್ರಕಲಾ ಪಾಂಡೆ ನೇತೃತ್ವ ವಹಿಸಿದ್ದರು. ರಾಜ್ಯ ನಾಯಕಿಯರಾದ ಸುಧಾ ಬಿಂದು ಮಿತ್ರಾ,ಸಂಧ್ಯಾ ಭಕ್ಷಿ, ರಾಂಪ್ಯಾರಿ ಮತ್ತು ಬಿಹಾರದ ಹನ್ನೆರಡು ಜಿಲ್ಲೆಗಳಿಂದ ಬಂದಿದ್ದ ಇತರರು ಮೆರವಣಿಗೆಯ ಮುಂಚೂಣಿಯಲ್ಲಿದ್ದರು.

### ಅಭಿನಂದನೆ

ಅತ್ಯಾಚಾರಕ್ಕೆ ಒಳಗಾದರೂ ದಿಟ್ಟತನದಿಂದ ಅದನ್ನು ಪ್ರತಿರೋಧಿಸುವ ಬಾಲಕಿಯನ್ನು ಮಹಿಳಾ ಸಂಘಟನೆ ಅಭಿನಂದಿಸಿದೆ. ಆಕೆಗೆ ಶೌರ್ಯ ಪ್ರಶಸ್ತಿ ನೀಡಿ ಗೌರವಿಸುವಂತೆ ಸರಕಾರವನ್ನು ಒತ್ತಾಯಿಸಿದೆ.

ಅನೇಕ ತಿಂಗಳಿಂದ ತೀರ್ಪು ಸಿಗದಿರುವ 70000 ಗ್ರಾಮೀಣ ಆರೋಗ್ಯ ಕಾರ್ಯಕರ್ತೆಯರಿಗೆ ನಿಯಮಿತವಾಗಿ ವೇತನ ನೀಡಬೇಕು, ಮಹಿಳೆಯರಿಗೆ ಉದ್ಯೋಗ ನೀಡಬೇಕು, ಭೂರಹಿತ ಹಾಗೂ ಮನೆ ಇಲ್ಲದ ಮಹಿಳೆಯರಿಗೆ ಜಂಟಿ ಪಟ್ಟಾಗಳನ್ನು ಕೊಡಬೇಕು,ಮದುವೆಯ ಕಡ್ಡಾಯ ನೊಂದಣಿ,ಸಾಮಾಜಿಕ ಭದ್ರತಾ ಪಿಂಚಣಿ ನೀಡಿಕೆ ಮೊದಲಾದ ಬೇಡಿಕೆಗಳನ್ನು ರ್‍ಯಾಲಿ ಮಂಡಿಸಿತು.

ಸಮಾನ ಕೆಲಸಕ್ಕೆ ಸಮಾನ ವೇತನ ನೀಡಿಕೆ ಮತ್ತು ರಾಜ್ಯ ಮಹಿಳಾ ಆಯೋಗದ ರಚನೆ ಇವೂ ಇನ್ನೆರಡು ಪ್ರಮುಖ ಬೇಡಿಕೆಗಳಾಗಿದ್ದವು.

## ಪ್ರಜಾಶಕ್ತಿ ಹೈದರಾಬಾದ್ ಆವೃತ್ತಿ

ಸಿಪಿಐ(ಎಂ) ಆಂಧ್ರ ಪ್ರದೇಶ ರಾಜ್ಯ ಸಮಿತಿಯ ಮುಖವಾಣಿಯಾದ 'ಪ್ರಜಾಶಕ್ತಿ'ಯ ಹೈದರಾಬಾದ್ ಆವೃತ್ತಿ ನವಂಬರ್ 6ರಿಂದ ಪ್ರಕಟವಾಗತೊಡಗಿದೆ.

ತೆಲಂಗಾಣ ಹೋರಾಟದ ನಾಯಕರೂ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ ಆದ ಸಂಸತ್ ಸದಸ್ಯ ಬಿ.ಎನ್.ರೆಡ್ಡಿ ಆವೃತ್ತಿಯನ್ನು ಬಿಡುಗಡೆ ಗೊಳಿಸಿದರು.

ಈ ಆವೃತ್ತಿಗಾಗಿ ಆಧುನಿಕ ತಂತ್ರಜ್ಞಾನ ಅಳವಡಿಸಿಕೊಳ್ಳಲಾಗಿದೆ.

## ಕರ್ನಾಟಕ ವಿಧಾನಸಭಾ ಚುನಾವಣೆಗಳು-94

ಪುಟ 3 ರಿಂದ

| ಶೇಕಡಾವಾರು | | | | |
|---|---|---|---|---|
| 1989ರಲ್ಲಿ | 46.6 | - | 20 | 50.5 |
| 1994ರಲ್ಲಿ | 26.1 | 5.8 | 40.8 | 16.4 |

ಜನತಾಪಕ್ಷ 1989ರಲ್ಲಿ 18.4 ಶೇ. ಮತಗಳಿಸಿತ್ತು.

### ಹಾಸನ

ಇಲ್ಲೂ ಕಳೆದ ಬಾರಿ ಎಲ್ಲಾ ಸ್ಥಾನಗಳನ್ನು ಗೆದ್ದಿದ್ದ ಕಾಂಗ್ರೆ ಈ ಬಾರಿ ಕೇವಲ 2ನ್ನು ಉಳಿಸಿಕೊಂಡಿದೆ. ಜನತಾದಳ 5 ಸ್ಥಾನಗಳನ್ನು ಪಡೆದುಕೊಂಡರೂ ಜನತಾಪಕ್ಷದ ಮತಗಳನ್ನೂ ಗಮನಿಸಿದರೆ ಶೇಕಡಾ ಮತಗಳಿಕೆ ಕಮ್ಮಿಯೇ ಆಗಿದೆ. ಕೆ.ಸಿ.ಪಿ. ಎಲ್ಲಾ ಕಡೆ ಠೇವಣಿ ಕಳೆದುಕೊಂಡಿದೆ. ಬಿಜೆಪಿ ಅರ್ಧದಷ್ಟು ಠೇವಣಿ ಕಳಕೊಂಡಿದೆ.

| ಬಲಾಬಲ | ಕಾಂಗ್ರೆಸ್(ಐ) | ಕೆಸಿಪಿ | ಜನತಾದಳ | ಬಿಜೆಪಿ |
|---|---|---|---|---|
| ಗೆದ್ದ ಸ್ಥಾನಗಳು | 2 | - | 5 | 1 |
| 2ನೇ ಸ್ಥಾನ | 5 | - | 1 | 2 |
| 3ನೇ ಸ್ಥಾನ | 1 | 2 | 2 | 3 |
| 4ನೇ ಸ್ಥಾನ | - | 6 | - | 1 |
| ಠೇವಣಿ ನಷ್ಟ | 1 | 8 | - | 4 |
| **ಗೆಲುವಿನ ಅಂತರ** | | | | |
| 1000ಕ್ಕಿಂತ ಕಡಿಮೆ | - | - | 1 | - |
| 1-2 ಸಾವಿರ | - | - | - | - |
| 2-5 ಸಾವಿರ | - | - | 1 | - |
| 5-10ಸಾವಿರ | 1 | - | 1 | - |
| 10-20 ಸಾವಿರ | 1 | - | 1 | - |
| 20 ಸಾವಿರಕ್ಕೂ ಹೆಚ್ಚು | - | - | 1 | - |
| **ಶೇಕಡಾವಾರು** | | | | |
| 1989ರಲ್ಲಿ | 49.6. | - | 13.3 | 2.2 |
| 1994ರಲ್ಲಿ | 35.5 | 5.0 | 38.0 | 15.8 |

ಜನತಾಪಕ್ಷ 1989ರಲ್ಲಿ ಶೇ. 27.2. ಮತ ಪಡೆದಿತ್ತು.

## ಮಾನವೀಯತೆಯ ಪ್ರತೀಕ

ಮೇ 8-9, 1945ರ ನಡುರಾತ್ರಿ ಅಮಾನುಷ ಅತ್ಯಾಚಾರಗಳಿಂದ ಇಡೀ ಮಾನವ ಕುಲಕ್ಕೆ ಕಳಂಕವಾಗಿದ್ದ ಹಿಟ್ಲರ್‌ಶಾಹೀ ಸೇನೆ ಜರ್ಮನಿಯ ಬರ್ಲಿನ್‌ನಲ್ಲಿ ಸೋವಿಯತ್ ಕೆಂಪು ಸೇನೆಗೆ ಶರಣಾಯಿತು. ಇಡೀ ಪೂರ್ವ ಯೂರೋಪನ್ನು ಹಿಟ್ಲರ್‌ಶಾಹಿ ಅಮಾನುಷ ಅತ್ಯಾಚಾರಗಳಿಂದ ರಕ್ಷಿಸಿದ ಸೋವಿಯತ್ ಸೇನೆಯ ಮಾನವೀಯತೆಯನ್ನು ಎತ್ತಿ ತೋರುವ ಬರ್ಲಿನ್‌ನ ಟ್ರೆಪ್ಟೋರ್ ಪಾರ್ಕ್‌ನಲ್ಲಿರುವ ಸೋವಿಯತ್ ಸೈನಿಕರಿಗ ಕಟ್ಟಿದ ಸ್ಮಾರಕ. ಒಂದು ಕೈಯಲ್ಲಿ ಹಿಟ್ಲರ್ ಶಾಹಿಯನ್ನು ಮೆಟ್ಟಿ ಹಾಕಿದ ಖಡ್ಗ ಮತ್ತೊಂದು ಕೈಯಲ್ಲಿ ಸೈನಿಕ ರಕ್ಷಿಸಿದ ಮಗು.



ಮಹಾನ್ ವಿಜಯಕ್ಕೆ

**50 ವರ್ಷ**

# 1995

### ಜುಲೈ

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| 30 | 31 | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |

### ಆಗಸ್ಟ್

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | 31 | | |

### ಸೆಪ್ಟೆಂಬರ್

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |

### ಅಕ್ಟೋಬರ್

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | 31 | | | | |

### ನವಂಬರ್

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | | |

### ಡಿಸೆಂಬರ್

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| 31 | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |

ಅಂತರ್ರಾಷ್ಟ್ರೀಯ ಜೋಸ್‌ಮಾರ್ತಿ ವರ್ಷ

ಕ್ಯೂಬಾದ ದಿಗ್ಬಂಧನದ ವಿರುದ್ಧ ಹೋರಾಟದ ವರ್ಷ

**ಅಕ್ಟೋಬರ್ 10, 1995**
ವಿಶ್ವ ಕ್ಯೂಬಾ ಬೆಂಬಲ ದಿನ

# ಐಕ್ಯರಂಗ

ಕರ್ನಾಟಕದ ಶ್ರಮಜೀವಿಗಳ ದನಿ

KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್. ಸಂಪಾದಕರು: ಪಿ.ರಾಮಚಂದ್ರರಾವ್. ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27. ಫೋನ್ ನಂ. 2236462 ಮುದ್ರಣ: ರಾಜಾ ಪ್ರಿಂಟರ್ಸ್, ಸಂಪಂಗಿರಾಮನಗರ, ಬೆಂಗಳೂರು. -27

# ಉತ್ತರ ಕನ್ನಡದಲ್ಲಿ ಚಿಂತನ ಕನ್ನಡ ಪುಸ್ತಕ ಮಳಿಗೆ ಪ್ರಾರಂಭ



ಶಿರಸಿ "ಜನತೆಯಲ್ಲಿ ಪುಸ್ತಕ ಕುರಿತು ಪ್ರೀತಿಯನ್ನು ಹುಟ್ಟಿಸುವ ಅಗತ್ಯ, ಆ ಮೂಲಕವಾಗಿ ನಮ್ಮ ಸ್ವಸ್ಕೃತಿಯ ಬಗೆಗೆ ಚಿಂತನೆಗೆ ಹಚ್ಚುವುದು ಇಂಥ ಪುಸ್ತಕ ಮಳಿಗೆಗಳ ಉದ್ದೇಶ ಆಗಬೇಕಾಗಿದೆ" ಎಂದು ಪುಸ್ತಕ ಪ್ರಾಧಿಕಾರ ಸದಸ್ಯ ಪ್ರಸಿದ್ಧ ಕವಿ ಚನ್ನವೀರಕಣವಿ ಹೇಳಿದರು.

ಅವರು ಇತ್ತೀಚೆಗೆ ಶಿರಸಿಯಲ್ಲಿ 'ಚಿಂತನ ಉತ್ತರಕನ್ನಡ'ದವರು ಕನ್ನಡ ಪುಸ್ತಕ ಪ್ರಾಧಿಕಾರದ ನೆರವಿನೊಂದಿಗೆ ಪ್ರಾರಂಭಿಸಿದ ಚಿಂತನ ಕನ್ನಡ ಪುಸ್ತಕ ಮಳಿಗೆಯನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಬೀದಿಯಲ್ಲಿ, ಬಸ್‌ಸ್ಟ್ಯಾಂಡಿನಲ್ಲಿ ಹೋಗಿ ಪುಸ್ತಕ ಮಾರಾಟಮಾಡಿ ಜ್ಞಾನಪ್ರಸಾರ ಮಾಡುವ 'ಚಿಂತನ'ದ ಕಾರ್ಯ ನಿಜಕ್ಕೂ ಶ್ಲಾಘನೀಯವಾದದ್ದು ಎಂದು ಹೇಳಿ ಲೇಖಕ,ಪ್ರಕಾಶಕ,ಮಾರಾಟಗಾರ ಹಾಗೂ ಓದುಗರ ನಡುವಿನ ಕೊಂಡಿಯೇ ಪುಸ್ತಕ ಪ್ರಾಧಿಕಾರದ ಉದ್ದೇಶ ಎಂದು ಹೇಳಿದರು. ರಾಜ್ಯೋತ್ಸವದ ದಿನ ಅರ್ಥಪೂರ್ಣ ರೀತಿಯಲ್ಲಿ ಪ್ರಾರಂಭವಾದ ಈ ಮಳಿಗೆ ಎಲ್ಲಾ ರೀತಿಯ ಪುಸ್ತಕಗಳನ್ನು ಹೊಂದಿ ಈ ಭಾಗದ ಜನತೆಗೆ ಓದುವ ಸಂಸ್ಕೃತಿ ಬೆಳಸಲಿ ಎಂದು ಹಾರೈಸಿದರು.

ಚಿಂತನ ಕಿರುಪುಸ್ತಕ ಮಾಲೆಯ ಲನೇ ಪುಸ್ತಕ "ಕಾವಿಯಲ್ಲಿ ಕುದಿದ ಕೆಂಡ ಸ್ವಾಮಿ ವಿವೇಕಾನಂದ" (ಲೆ॥ ಜ.ಹೊ.ನಾರಾಯಣಸ್ವಾಮಿ) ಪುಸ್ತಕವನ್ನು ಕುವೆಂಪು ವಿ.ವಿ. ಉಪನ್ಯಾಸಕ ಪ್ರಸಿದ್ಧ ವಿಮರ್ಶಕ ಡಾ.ಕೇಶವ ಶರ್ಮಗಾಡೆ ಮಾಡಿದರು ಅವರು ಮಾತನಾಡಿ ಓದುವವರ ಚಿಂತನ ಕ್ರಮ ವೈಜ್ಞಾನಿಕವಾಗಿ ರೂಪುಗೊಳ್ಳಬೇಕು ಇಂದಿನ ಕ್ಯಾಸೆಟ್ ಹಾಗೂ ಸ್ಟಾರ್ ಟಿ.ವಿ.ಗಳಿಂದ ದೇಶದಲ್ಲಿ ಅರಾಜಕತೆ ಹೆಚ್ಚುತ್ತಿದೆ. ಇದನ್ನು ತೊಡೆದು ಒಳ್ಳೆಯದನ್ನು ಓದುವ ಕ್ರಮ ಬೆಳಸಿಕೊಳ್ಳಬೇಕು ಎಂದು ಹೇಳಿ ವಾಸ್ತವದಲ್ಲಿ ಎದುರಿಸುತ್ತಿರುವ ಅನೇಕ ಸವಾಲುಗಳ ಮಧ್ಯೆ ವಿವೇಕಾನಂದರ ಈ ಕಿರು ಪುಸ್ತಕ ಆದದ್ದು ಜ.ಹೊ.ನಾರಾಯಣಸ್ವಾಮಿ ಅವರ ಶ್ರಮ ಸಾರ್ಥಕವಾದದ್ದು ಎಂದು ಹೇಳಿದರು.

ಮುಖ್ಯ ಅಥಿತಿಯಾಗಿ ಡಾ.ಗುರುಲಿಂಗರಾಜಸೆ ಭಾಗವಹಿಸಿದ್ದರು ಹಿರಿಯರಾದ ಯಸವಂತ ಹೆರವಟ್ಟಾ ಅಧ್ಯಕ್ಷತೆ ವಹಿಸಿದ್ದರು.

ಶ್ರೀಪಾದ ಭಟ್ಟರ ಹಾಡಿನೊಂದಿಗೆ ಪ್ರಾರಂಭವಾದ ಕಾರ್ಯಕ್ರಮಕ್ಕೆ ಕಿರಣ ಭಟ್ಟ ಸ್ವಾಗತ ಕೋರಿದರು. ಡಿ.ಆರ್.ನಾಯಕ್ ನೆನಪಿನ ಕಾಣಿಕೆ ಅರ್ಪಿಸಿದರು ವಿಠ್ಠಲ ಭಂಡಾರಿ 'ಚಿಂತನ'ದ ಈವರಗಿನ ಕಾರ್ಯ ಕ್ರಮದ ಬಗ್ಗೆ ಹೇಳಿ ಪುಸ್ತಕ ಮಳಿಗೆಯನ್ನು ಪ್ರಾರಂಭಿಸುವ ಉದ್ದೇಶವನ್ನು ವಿವರಿಸಿದರು. ಮತ್ತೀ ಹಳ್ಳಿ ಸುಬ್ರಾಯ ವಂದಿಸಿದರು.

## ಚಿಂತನದಿಂದ ಕುವೆಂಪು ಸಾಹಿತ್ಯದ ಕುರಿತು ಚರ್ಚೆ

ಡಿಸೆಂಬರ್ 4 ರಂದು ಚಿಂತನ ಉತ್ತರ ಕನ್ನಡದವರು ಶಿರಸಿಯಲ್ಲಿ ಕುವೆಂಪು ಸ್ಮರಣೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಪ್ರೋ. ನಾರಾಯಣರಾವ್ ರವರು ಕಾರ್ಯ ಕ್ರಮವನ್ನು ಉದ್ಘಾಟಿಸಿದರು ಅಧ್ಯಕ್ಷತೆಯನ್ನು ಡಾ.ಶ್ರೀ ಕಂಠ ಕೊಡಿಗೆಯವರು ವಹಿಸಿದ್ದರು. ಮೊದಲ ಗೋಷ್ಠಿಯಲ್ಲಿ ಕುವೆಂಪು ಕತೆಗಳ ಮೇಲೆ ವಿಠ್ಠಲ ಭಂಡಾರಿಯವರೂ, ರಾಮಾಯಣದರ್ಶನಂ ಕೃತಿಯ ಬಗೆಗೆ ಹೊರೆಯಾಲದೊರೆಸ್ವಾಮಿಯವರೂ, ಕುವೆಂಪು ಅವರ ವೈಚಾರಿಕತೆಯ ಬಗ್ಗೆ ಡಾ॥ ಶ್ರೀ ಕಂಠ ಕೂಡಿಗೆಯವರೂ ಮಾತನಾಡಿದರು.

ಹೊರೆಯಾಲ ದೊರೆಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆ ಎರಡನೇ ಗೋಷ್ಠಿಯಲ್ಲಿ ಕಾದಂಬರಿಗಳ ಮೇಲೆ ಡಾ॥ ಎಂ.ಜಿ.ಹೆಗಡೆ ಯವರು ಕುವೆಂಪು ಅವರ ನಾಟಕಗಳ ಮೇಲೆ ಮುನ್ನಡೆ ಸಂಪಾದಕ ಕಶ್ಯಪ ಪರ್ಣ ಕುಟಿಯವರು ಮಾತನಾಡಿದರು.

ಪ್ರಾರಂಭದಲ್ಲಿ ಎಂ.ಲೋಕೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಿರಣ್ ಭಟ್ ಸ್ವಾಗತಿಸಿ ಕಾರ್ಯಕ್ರಮ ನಿರ್ವಹಿಸಿದರು.

## ಕೊನೆಗೂ ಕುರ್ಚಿ ಬಿಟ್ಟರು....

ಪುಟ 1ರಿಂದ

ನಂತರ ಇಬ್ಬರು ಶಾಲೆಗೆ ಹೋಗುವ ಮಕ್ಕಳಿರುವ ಕುಟುಂಬಕ್ಕೆ ತಿಂಗಳಿಗೆ 40 ಕೆ.ಜಿ. ಪುಕ್ಕಟೆ ನೀಡುವ ವಚನ ನೀಡಿತು. ಆದರೆ ಜನ ಕಾಂಗ್ರೆಸ್ ಮಾತು ನಂಬಲಿಲ್ಲ, ತೆಲುಗು ದೇಶಂನ ವಚನ ನಂಬಿದರು.

ಈಗ ಸಕ್ಕರೆ ಹಗರಣ, ಶೇರು ಹಗರಣ ಕುರಿತಂತೆ ಕಾಂಗ್ರೆ ಮುಖಂಡರ ವರ್ತನೆಗಳಿಂದಾಗಿ ಕಾಂಗ್ರೆಸ್(ಐ)ನ ವಿಶ್ವಾಸಾರ್ಹತೆ ಪಾತಾಳಕ್ಕಿಳಿದಿದೆ. ಇಂತಹ ಪಕ್ಷ ಇನ್ನೂ ದೇಶವನ್ನಾಳಲು ಬಿಡಬೇಕೆ? ಕಾಂಗ್ರೆಸ್(ಐ)ನ 'ಉದಾರೀಕರಣ'ದ 'ಮುಕ್ತ' ವಾತಾವರಣದಲ್ಲಿ ಹುಟ್ಟಿದ್ದು ಕುಣಿಯುತ್ತಿರುವ ಭ್ರಷ್ಟಾಚಾರದಲ್ಲಿ ಕಳಂಕಿತರಾದ ಮೂವರಂತೂ ಕುರ್ಚಿ ಬಿಡುವಂತಾಗಿದೆ. ಆದರೆ ಈಗ ಕನಿಷ್ಠ ಈ 'ಕಳಂಕಿತ'ರನ್ನು ಶುಭ್ರರನ್ನಾಗಿ ಪ್ರದರ್ಶಿಸಲು ಕೊನೆಯವರೆಗೂ ಹೆಣಗಿದ 'ಕಳಂಕ'ವರನ್ನು ಹೊತ್ತಿರುವ ಪ್ರಧಾನಿಗಳನ್ನು ಏನು ಮಾಡಬೇಕು? ದೇಶದ ಕೋಟ್ಯಂತರ ಜನ ಈ ಬಗ್ಗೆ ಯೋಚಿಸುವಂತಾಗಿದೆ.

# ಹಣಕಾಸು ನೀತಿಗಳನ್ನು ಬದಲಿಸಿ-

## ಬಜೆಟ್ ಪೂರ್ವ ಸಭೆಯಲ್ಲಿ ಕಾರ್ಮಿಕ ಸಂಘಟನೆಗಳ ಒತ್ತಾಯ

ಹಣಕಾಸು ಮಂತ್ರಿ ಡಾ. ಮನಮೋಹನ್ ಸಿಂಗ್ ರೊಂದಿಗೆ ನಡೆದ ಬಜೆಟ್ ಪೂರ್ವ ಚರ್ಚೆಯಲ್ಲಿ ಕೇಂದ್ರ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳು ಭಾರತ ಸರಕಾರ ಹಣಕಾಸು ನೀತಿಗಳನ್ನು ಬದಲಿಸಬೇಕು ಎಂದು ಒತ್ತಾಯಿಸಿದರು. ಇಂಟಕ್, ಸಿಐಟಿಯು, ಎಐಟಿಯುಸಿ, ಹೆಚ್.ಎಂ.ಎಸ್., ಬಿಎಂಎಸ್, ಯುಟಿಯುಸಿ, ಟಿಯುಸಿಸಿ ಹಾಗೂ ಎನ್.ಎಲ್.ಓ ಪ್ರತಿನಿಧಿಗಳು ಈ ಸಭೆಯಲ್ಲಿ ಭಾಗವಹಿಸಿದರು.

ಸರಕಾರದ ಹಣಕಾಸು ನೀತಿಗಳು ದೇಶದಲ್ಲಿ ಅಸಮಾನತೆಯನ್ನು ಹೆಚ್ಚಿಸಿವೆ. ಆದ್ದರಿಂದ ಒಂದು ರಾಷ್ಟ್ರೀಯ ವೇತನ ಮತ್ತು ಆದಾಯ ನೀತಿ ರೂಪಿಸಬೇಕು. ದೇಶದ ಅತಿ ಶ್ರೀಮಂತ ವಿಭಾಗದ ಆದಾಯದ ಮೇಲೆ ಮಿತಿ ಹಾಕಬೇಕು ಎಂದು ಕೇಂದ್ರ ಕಾರ್ಮಿಕ ಸಂಘಟನೆಗಳು ಒತ್ತಾಯಿಸಿದವು.

ಬೋನಸ್ ಪಾವತಿ ಕಾಯಿದೆಯಲ್ಲಿನ ಮಿತಿಗಳನ್ನು ತೆಗೆಯಬೇಕು, ಸಾರ್ವಜನಿಕ ಉದ್ದಿಮೆಗಳ ನೌಕರರ ತುಟ್ಟಿಭತ್ಯೆ ಸ್ಲಾಬ್ ಪದ್ಧತಿಯ ಪ್ರಶ್ನೆಯನ್ನು ಇತ್ಯರ್ಥಗೊಳಿಸಬೇಕು, ಕೇಂದ್ರ ಕಾರ್ಮಿಕ ಸಂಘಟನೆಗಳೊಂದಿಗೆ ಪರಾಮರ್ಶಿಸಿ ನಿವೃತ್ತಿಯನ್ನು ಅಂತಿಮ ಗೊಳಿಸಬೇಕು. ಆದಾಯಕರ ಮಿತಿಯನ್ನು 60ಸಾವಿರ ರೂಪಾಯಿಗಳಿಗೇರಿಸಬೇಕೆಂದು ಅವರು ಒತ್ತಾಯಿಸಿದರು.

### 'ನವೀಕರಣ ನಿಧಿಯನ್ನು ರೋಗಗ್ರಸ್ತ ಘಟಕಗಳ ಸುಧಾರಣೆಗೆ ಬಳಸಲಿ

ಸಿಐಟಿಯು ಪ್ರಧಾನ ಕಾರ್ಯದರ್ಶಿ ಡಾ.ಎಂ.ಕೆ. ಫಂದೆ ಮಾತನಾಡುತ್ತಾ ಹಿಂದಿನ ಬಜೆಟ್‌ಗಳಲ್ಲಿ ನೀಡಿದ ರಿಯಾಯ್ತಿಗಳಿಂದ ದೊಡ್ಡ ಕೈಗಾರಿಕಾ ಮನೆತನಗಳು ಸೂಪರ್ ಲಾಭ ಗಿಟ್ಟಿಸಿವೆ, ಆದರೆ ಆ ಹಣವನ್ನು ಉತ್ಪಾದಕ ಚಟುವಟಿಕೆಗಳಿಗೆ ಮತ್ತೆ ತೊಡಗಿಸಿಲ್ಲ, ಇದರಿಂದ ಸಟ್ಟಾ ಚಟುವಟಿಕೆಗಳು ಜಾಸ್ತಿಯಾಗಿವೆ ಎಂದು ಹೇಳುತ್ತಾ ಸರಕಾರ ಈ ವಲಯಗಳಿಂದ ಆದಾಯ ಸಂಗ್ರಹಿಸಲು ಕ್ರಮ ಕೈಗೊಳ್ಳಬೇಕು ಎಂದರು. "ರಾಷ್ಟ್ರೀಯ ನವೀಕರಣ ನಿಧಿ"ಯನ್ನು ಉದ್ದಿಮೆಗಳು ರೋಗಪೀಡಿತವಾಗುವುದನ್ನು ತಪ್ಪಿಸಲು ಉಪಯೋಗಿಸಬೇಕು ಎಂದು ಸೂಚಿಸಿದರು.

ಭಾರತ ಸರಕಾರಧ ಆರ್ಥಿಕ ನೀತಿಗಳ ಪರಾಮರ್ಶೆ ನಡೆಸಲು ಹಣಕಾಸು ಸಚಿವಾಲಯದೊಡನೆ ಕೇಂದ್ರ ಕಾರ್ಮಿಕ ಸಂಘಟನೆಗಳೊಂದಿಗೆ ಸಭೆ ನಡೆಸಬೇಕು ಎಂಬ ಸಿಐಟಿಯು ಒತ್ತಾಯವನ್ನು ಹಣಕಾಸು ಮಂತ್ರಿಗಳು ಒಪ್ಪಿಕೊಂಡರು.

ಮಹಾರಾಷ್ಟ್ರದಲ್ಲಿ ಎನ್ರೋನ್ ವಿದೇಶೀ ಕಂಪೆನಿಗೆ ಅವರು ವಿದ್ಯುತ್ ವಲಯದಲ್ಲಿ ತೊಡಗಿಸಿದ ಹಣಕ್ಕೆ ಕ್ರಿತಿ-ಗ್ಯಾರಂಟಿ ನೀಡುವ ಸರಕಾರದ ಕ್ರಮ ರಾಷ್ಟ್ರೀಯ ಹಿತಾಸಕ್ತಿಗಳಿಗೆ ಆಘಾತವುಂಟು ಮಾಡುತ್ತದೆ ಎಂದು ಡಾ॥ ಫಂದೆ ಟೀಕಿಸಿದರು.

ವಿದ್ಯುತ್ ಬಳಸದ ಸಣ್ಣ ಟಿನ್ ಪ್ಲೇಟ್ ತಯಾರಿಕಾ ಘಟಕಗಳ ಮೇಲೆ ಹಾಕಿರುವ ಅಬಕಾರಿ ಸುಂಕವನ್ನು ರದ್ದು ಮಾಡಬೇಕೆಂದು ಸಿಐಟಿಯು ಅಧ್ಯಕ್ಷ ಹಾಗೂ ಸಂಸತ್ ಸದಸ್ಯ ಇ. ಬಾಲಾನಂದನ್ ಆಗ್ರಹಪಡಿಸಿದರು. ಸಣ್ಣ ಸಿಗರೇಟುಗಳನ್ನು ಆರಂಭಿಸಿದ್ದುದರಿಂದ ಬಹಳಷ್ಟು ಬೀಡಿ ಕಾರ್ಮಿಕರ ಕೆಲಸಕ್ಕೆ ಸಂಚಕಾರ ಬಂದಿದೆ ಎಂದು ಅವರು ಟೀಕಿಸಿದರು.

ಬಹುರಾಷ್ಟ್ರೀಯ ಕಂಪೆನಿಗಳಿಗೆ ರಿಯಾಯ್ತಿ ನೀಡುವ ನೀತಿಯಿಂದಾಗಿ ಭಾರತೀಯ ಕಂಪೆನಿಗಳಿಗೆ ತೊಂದರೆಯಾಗಿದೆ ಎಂದು ಅವರು ಟೀಕಿಸಿದರು.

1995-96ರ ಬಜೆಟ್ ಮಂಡಿಸಿದ ಮೇಲೆ ಕೇಂದ್ರ ಕಾರ್ಮಿಕ ಸಂಘಟನೆಗಳ ಅಭಿಪ್ರಾಯ ಪಡೆಯಲು ಒಂದು ಪ್ರತ್ಯೇಕ ಸಭೆ ಕರೆಯುವುದಾಗಿ ಡಾ. ಮನಮೋಹನ್ ಸಿಂಗ್ ಭರವಸೆ ನೀಡಿದ್ದಾರೆ.

(ಐ.ಎನ್.ಎನ್.)